
ಕೊರವಂಜಿ

Koravanji



ಅಕ್ಟೋಬರ್
೧೯೫೪

★

ಸಂಪಾದಕರು :
ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ದಾಶರಥಿ ದೀಕ್ಷಿತ್
ಶ್ರೀ|| ಕಾಮತ್
ಶ್ರೀ|| ರಾಮಕೃಷ್ಣ
ಶ್ರೀ|| ಅ. ರಾ. ಸೇ.
ಶ್ರೀ|| ನಾ. ಕಸ್ತೂರಿ
ಶ್ರೀ|| "ಕೇಫ"
ಶ್ರೀ|| ರೇವಣ್ಣ
ಶ್ರೀ|| ಪಾಟಾಳಿ
ಶ್ರೀ|| ಕುಮಾರ್
ಶ್ರೀ|| ಹಾ. ರಾ.

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ
ಕೇವಲ ನಾಲ್ಕಾಣೆ

ಅತ್ಯಂತ ಜನಪ್ರಿಯವಾಗಿ ನಡೆಯುತ್ತಿದೆ.

ಬೆಂಗಳೂರು: **ನ್ಯೂ ಸಿಟಿ — ಸ್ವಸ್ತಿಕ್**


ಮೈಸೂರು:	ಮಂಗಳೂರು:	ಶಿವಮೊಗ್ಗ:
ಚಾಮುಂಡೇಶ್ವರಿ	**ನ್ಯೂ ಚಿತ್ರಾ**	**ಸುದರ್ಶನ**

ಚಿತ್ರದುರ್ಗ: **ರೂಪವಾಣಿ** ಚಿಕ್ಕಮಗಳೂರು: **ಗುರುನಾಥ**



1-10-54 ರಿಂದ ಪ್ರಾರಂಭ — ದಾವಣಗೆರೆ: ಮೋತಿ

ಸಂಕಲಿಕೆ ಉಡುಪಿನಿಂದ
ಕೆಡಿಸಲ್ಪಟ್ಟ
ಮದುವೆ



ಮದುವೆಗೆ ಮುಂಚೆ ಸಂಕಲಿಕೆ ಉಡುಪನ್ನು ಧರಿಸುವುದು ಕನ್ಯೆಗೆ ಕೇಡು ಎಂಬ ನಂಬಿಕೆ ಸ್ಕಾಟ್‌ಲೆಂಡಿನಲ್ಲಿದೆ.


ಪ್ರಪಂಚದಲ್ಲೆಲ್ಲಾ ಕನ್ಯೆಯೂ, ಕನ್ಯಾ ಪಿತೃಗಳೂ ಮದುವೆಯನ್ನು ಹಿರಿಯದಾದ ವ್ರತವೆಂದು ಭಾವಿಸಿ, ಉತ್ಸಾಹದಿಂದ ಎದುರು ನೋಡುತ್ತಾರೆ.

ಆದರೆ! ಕನ್ಯಾ ಪಿತೃಗಳು ಸಾಕಷ್ಟು ದೂರ ದೃಷ್ಟಿಯಿಲ್ಲದೆ, ಮದುವೆಗಾಗಿ ವಿಮೆ ಮಾಡದೆ, ಎಷ್ಟು ಮದುವೆಗಳು ಹೆಚ್ಚುಕಡಿಮೆಯಾಗುತ್ತವೆ!

ಬೊಂಬಾಯಿ ಮ್ಯೂಚುವಲ್‌ರವರಲ್ಲಿನ ವಿಮೆಯು, ನಿಮ್ಮ ಮಗಳ ಸುಖ ಮದುವೆಯ ಅಸ್ತಿಭಾರವಾಗಬಲ್ಲುದು.



ಮದುವೆ ಉಡುಗೆರೆ ಪಾಲಿಸಿಯು ಹೆಚ್ಚು ತ್ರಾಸಿಲ್ಲದೆ, ತಾಯಿ ತಂದೆಯರು ತಮ್ಮ ಮಕ್ಕಳ ಮದುವೆಗೆ ಏರ್ಪಡಿಸಲು ಸಹಾಯಕವಾಗುತ್ತದೆ. ಎಷ್ಟು ಎಳೆತನದಲ್ಲಿ ಮಗುವಿಗೆ ವಿಮೆ ಮಾಡಿದರೆ, ಅಷ್ಟು ಸುಲಭವಾಗುತ್ತದೆ, ಎಲ್ಲರಿಗೂ!



ಸ್ಥಾಪನೆ:
1871

ದಿ

ಬಾಂಬೆ ಮ್ಯೂಚುವಲ್
ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಬಾಂಬೆ ಮ್ಯೂಚುವಲ್ ಬಿಲ್ಡಿಂಗ್,
ದಾದಾಭಾಯ್ ನೌರೋಜಿ ರೋಡ್, ಬೊಂಬಾಯಿ 1.
ಬೆಂಗಳೂರು ಬ್ರಾಂಚ್ ಕಛೇರಿ:—172/3, ನರಸಿಂಹರಾಜಾ ರಸ್ತೆ, ಬೆಂಗಳೂರು 2.

NAS 133

EVERY POLICYHOLDER A SHAREHOLDER

ಬೆಂಗಳೂರು: ಗೀತಾ — ಶಾರದಾ

ಮೈಸೂರು: ರಾಜಕಮಲ್

ವಿಕ್ರಮ್ ಪ್ರೊಡಕ್ಷನ್ಸ್‌ರವರ—

ನಮ್ಮ ಗೋಪಿ
(ತೆಲುಗು)



ಜಿ. ವರಲಕ್ಷ್ಮಿ - ನಾಗಯ್ಯ - ಜಮುನ - ರೇಲಂಗಿ - ನರಸಿಂಹರಾವ್
ಮಾಸ್ಟರ್ ವೆಂಕಟೇಶ್ವರ್.

ನಿರ್ದೇಶನ: ಬಿ ಎಸ್. ರಂಗಾ

A VIJAYA TALKIE RELEASE

ಕೊರವಂಜಿ

A. ANANTHIAH

ಸಂಪುಟ ೧೩ ಅಕ್ಟೋಬರ್ ೧೯೫೪ ಸಂಚಿಕೆ ೬

ಕುಹಕಿಡಿಗಳು

೩೪ರ ಕೆಚ್ಚನ್ನೂ ೬೪ರ ಅನುಭವವನ್ನೂ ೯೪ಕ್ಕೆ ಕಾಲಿಡುವಾಗ ಶ್ರೀ ಎಂ. ವಿ. ಯವರು ಸಾಧಿಸುತ್ತಿರುವುದನ್ನು ನೋಡಿ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

* * *

ಕಾಶ್ಮೀರ ಪುರವಾಸಿನಿ ಎಂದು ಸರಸ್ವತಿಯನ್ನು ಈ ಸಲ ಹಬ್ಬದಲ್ಲಿ ಪ್ರಾರ್ಥಿಸುವುದು ಅಷ್ಟಾಗಿ ಸತ್ಯ ಹೇಳಿದಂತಾಗುತ್ತದೆಯೇ!

* * *

ಆಯುಧ ಪೂಜೆಗಾಗಿ ಮಹಾನವಮಿ ಹಬ್ಬದ ಪ್ರಯುಕ್ತ ಟೋಪಿಗಳನ್ನು ಒಂದೇ ಹಗಲಲ್ಲಿ ಒಗೆದು ಇಸ್ತ್ರಿಮಾಡಿ ಕೊಡುತ್ತೇವೆ ಎಂದು ಅಗಸನೊಬ್ಬನು ಜಾಹಿರಾತು ಮಾಡಿರುವನಂತೆ.

* * *

ವಿಜಯದಶಮಿ ದಿನವೇ ಸೆಪ್ಟೆಂಬರ್ ಪರೀಕ್ಷೆಗಳನ್ನು ಇರಿಸುವುದು ನಮ್ಮ ಸಂಸ್ಕೃತಿಗೆ ತಕ್ಕುದು, ಹಾಗೂ ಜಯಪ್ರದವಾಗುವುದು ಎಂದು ದಂಡಯಾತ್ರೆಗಳನ್ನೆತ್ತಿದ ನೊಂದ ವಿದ್ಯಾರ್ಥಿ ಸಲಹೆಮಾಡಿದ್ದಾನೆ.

* * *

ಈ ಸಾರಿ ಭಾರತದಲ್ಲಿ ಬೊಂಬೆ ತೋರಿಸುವಾಗ, ಜಪಾನೀ ಬೊಂಬೆಗಳು, ರಷ್ಯಾ ಬೊಂಬೆಗಳು ಮಾತ್ರವೇ ಇದ್ದುವು, ಇಂಗ್ಲೆಂಡಿನ ಬೊಂಬೆಗಳಿರಲೇ ಇಲ್ಲ ಎಂದು ಇಂಗ್ಲೆಂಡಿನಲ್ಲಿ ಚಳುವಳಿ ಹೂಡಿದ್ದಾರೆಂಬುದು ಸುಳ್ಳಂತೆ.

*　　　　*　　　　*

"ಸತ್ತವರನ್ನು ಸುಡಲೇಬೇಕು" ಎಂಬ ಮಸೂದೆಯನ್ನು ಶ್ರೀ ತೇಲ್ಕಿಕರ್ ಅವರು ಮಂಡಿಸಿದರಂತೆ.

—ಸತ್ತವರನ್ನು ಏನಾದರೂ ಮಾಡಲಿ, ಇದ್ದವರನ್ನು ಬೇಯದೇ ಇರುವಂತೆ ಮಾಡಬಾರದೇ ಪುಣ್ಯಾತ್ಮ!

*　　　　*　　　　*

ಆದರ್ಶ ವಿದ್ಯಾಮಂದಿರದ ಸಲುವಾಗಿ ಮೊದಲು ಲಾಟರಿ ಎತ್ತಲಾಗುತ್ತದಂತೆ.

—ನ್ಯಾಯವೇ ಸರಿ! ಈಗ ವಿದ್ಯಾಮಂದಿರಗಳು, ವಿದ್ಯೆ ಕಲಿಸುವವರೂ, ವಿದ್ಯೆ ಕಲಿತವರೂ ಎಲ್ಲರೂ ಲಾಟರಿ ಹೊಡೆಯುತ್ತಿಲ್ಲವೇ?

—ಲಾಟರಿಯಿಂದ ಮೊದಲಾಗುವುದು ಸಹಜವೇ!

*　　　　*　　　　*

ಭೂದಾನ ಯಜ್ಞಕ್ಕೆ ಹೈದರಾಬಾದಿನ ನಿಜಾಮರು ದಾನಮಾಡಿದರಷ್ಟೆ! –ಆ ಭೂಮಿಯು ಅವರದಲ್ಲವೆಂದೂ, ಸರ್ಕಾರದ್ದೆಂದೂ ಇತ್ತೀಚಿಗೆ ತಿಳಿದುಬಂದಿದೆ ಯಂತೆ.

—ಏನು ಮಹಾ! ನಮ್ಮೂರಿನಲ್ಲಿ ಕೂಡ ನಾವು ಕೊಂಡು ದಾನಮಾಡಿದ ಭೂಮಿಯು ಕೂಡ ಮಾರಿದವನದಲ್ಲವೆಂದು ಮೊಕದ್ದಮೆ ಹೂಡಿರಲಿಲ್ಲವೇ?

*　　　　*　　　　*

ಹಿಂದಿ ರಾಜ್ಯವಾದಾಗ, ಹಿಂದಿನವರು ಮಾಡಿದ್ದು ಮಾತೃಭಾಷೆಯಲ್ಲಿರುವುದ ರಿಂದ ಮುಂದಿನ ಮಕ್ಕಳಿಗೆ ಅರ್ಥವಾಗದೆ ಹಿರಿಯರಲ್ಲಿ ಗೌರವ ಮೂಡಬಹುದು ಎಂದು ಶಿರ್ಸಿಾಯು ಕೇಡಿಯವರು ಸೂಚಿಸಿದ್ದಾರೆ.

*　　　　*　　　　*

ಉಕ್ಕಿನ ಕೈಗಾರಿಕೆಗೆ ಸಲಹೆಕೊಡಲು ರಷ್ಯಾದಿಂದ ನಮ್ಮೂರಿಗೆ ಪ್ರವೀಣರು ಬರುತ್ತಾರಂತೆ.

—ಉಕ್ಕಿನ ಮನುಷ್ಯನ ಗೋತ್ರೋದ್ಭವರಿರಬೇಕಲ್ಲವೇ?

*　　　　*　　　　*

ಉರಿಗಾಳು

ನ್ಯೂಯಾರ್ಕ್ ನಗರದ ಪೀಟರ್ ಡಿವಿಟ್‌ರವರ ಹತ್ತಿರ ಪ್ರಪಂಚದ ಅತೀ ಚಿಕ್ಕ ವಜ್ರದ ಹರಳಿದೆಯಂತೆ....ಏಕೆ? ಎಂಥ ಬೂದುಗಾಜಿಗೂ ಕಾಣಿಸದ ವಜ್ರ ನಮ್ಮ ಹತ್ತಿರ ಇದೆ ಎಂಬುದು ಇನ್ನೂ ವರದಿಯಾಗಿಲ್ಲವೆಂದೋ?

*　　　*　　　*

ಇಂಡಿಯಾದೇಶದ ಪಟ್ಟಣಗಳಲ್ಲಿರುವ ರಸ್ತೆಗಳು ಇಂಡೋಚೀಣ ಇಂಡೋನೇಸಿಯ ಪಟ್ಟಣಗಳಲ್ಲಿರುವ ರಸ್ತೆಗಳಿಗಿಂತ ಉತ್ತಮವಾಗಿವೆ....ಆದರೆ, ಅವೆಲ್ಲವೂ ಮುನಿಸಿಪಲ್ ಆಫೀಸ್ ಕಡೆಗೇ ಕೇಂದ್ರೀಕೃತವಾಗಿವೆಯಲ್ಲಾ.

*　　　*　　　*

ಡಾ|| ಮಸೂಯಾಮೂ ಎಂಬ ಜಪಾನೀ ವೈದ್ಯರು ಹಿರೋಷಿಯಾ ಪರಿಶೀಲನೆಗಳಿಂದ ಕಂಡುಹಿಡಿದಿರುವುದೇನೆಂದರೆ, ಗಂಡಿಗಿಂತ ಹೆಣ್ಣೇ ಅಣುಬಾಂಬಿನ ಆಸ್ಫೋಟನೆಯನ್ನು ತಡೆಯಬಲ್ಲಳು .... ಹೆಣ್ಣಿನ 'ಬಾಳು ಕಣ್ಣೀರು! ತಡೆದು ಉಳಿದವರಿಗೆ' ತಾನೆ ಕಣ್ಣೀರು ?

*　　　*　　　*

೨೪ ಗಂಟೆಗಳಲ್ಲಿ ಕೇಂದ್ರ ಸರ್ಕಾರ ಬೇಕಾದರೆ ಅಖಂಡ ಕರ್ನಾಟಕವನ್ನು ರಚಿಸಿಬಿಡಬಹುದು, ಎಂಬ ಮಾತಿನ ಅರ್ಥ, "ಒಂದೊಂದು ಗಂಟೆಯೂ ಒಂದೊಂದು ಶ್ರುತಿ ಕೊಡುವುದರಿಂದ, ಕೇಂದ್ರ ಸರ್ಕಾರವೇ ಅವನ್ನು ಸರಿಪಡಿಸಬೇಕು" ಎಂದಂತೆ.

*　　　*　　　*

ಫಾರ್ಮೋಸ ದ್ವೀಪದಲ್ಲಿ ನಿನ್ನನ್ನು ಕೂರಿಸಿ, ಮುಂದೆ ನಿನ್ನನ್ನು ಚೀಣಾ ಚಕ್ರವರ್ತಿಗಿರಿಗೆ ಏರಿಸುತ್ತೇವೆ, ಎಂದು ಡಲ್ಲಸ್‌ರವರು ಚ್ಯಾಂಗ್ ಕೈಷೇಕ್‌ರಿಗೆ ವಾಗ್ದಾನಮಾಡಿದಾರಂತೆ.... ಮೋಸ, ಮೋಸ, ಶುದ್ಧ ಮೋಸ.

*　　　*　　　*

ಭಾರತಕ್ಕೆ ಚಾರ್ಲಿ ಚಾಪ್ಲಿನ್ ಭೇಟಿಕೊಡುವರಂತೆ....ಅಷ್ಟರೊಳಗೆ ನಮ್ಮಲ್ಲಿರುವ ಚಾರ್ಲಿಗಳ ಸಂಖ್ಯೆ ಇನ್ನೂ ಹೆಚ್ಚಬಹುದೆಂದು ಆಶಿಸೋಣ. "ಚಾರ್ಲಿ ಸಮ್ಮೇಳನ"ವೊಂದನ್ನು ನಡೆಸಿ ಅವರಿಂದ ಉದ್ಘಾಟಿಸುವುದು ಸೂಕ್ತ ಅಲ್ಲವೆ?

*　　　*　　　*

ದಸರಾ ವಸ್ತುಪ್ರದರ್ಶನಕ್ಕಾಗಿ ಈಗಾಗಲೇ ಪರಸ್ಥಳದಿಂದ ಜನರ ಗುಂಪು ಮೈಸೂರಿಗೆ ಬರತೊಡಗಿದೆ, ಸೆಪ್ಟೆಂಬರ್ ೨೩ಕ್ಕೇನೇ ಸುದ್ದಿ ಬಂದಿತ್ತು . ಕಳೆದವರ್ಷ ಬಂದಿದ್ದವರಿಗಿಂತ ಈ ವರ್ಷ ಬಂದಿರುವವರು ಹೆಚ್ಚು ಆಕರ್ಷಣೀಯವಾಗಿದಾರೆ, ಎಂದು ಅನೇಕ ಪ್ರೇಕ್ಷಕರು ಆಗಲೇ ಹೇಳುತ್ತಿದಾರೆ.

* * *

ಬೊಂಬಾಯಿನಗರದ ಸಿನಿಮಾ ಪ್ರಪಂಚಕ್ಕೆ ನುಗ್ಗಿ ಹೀರೋ ಎನ್ನಿಸಿಕೊಳ್ಳು ವುದೇ ನನ್ನ ಹೆಬ್ಬಯಕೆ .... ಅದಕ್ಕೇನು? ಯಾವುದಾದರೂ ಹಿಂದೀ ಚಿತ್ರವನ್ನು ನೋಡಹೋಗಿ, ಉದ್ದಕ್ಕೂ ಕೂತರೆ, ಹೀರೋ ಎನ್ನಿಸಿಕೊಳ್ಳಬಹುದಲ್ಲಾ....

* * *

ಡೆನ್‌ಮಾರ್ಕ್ ದೇಶದಲ್ಲಿ ಗಂಡಸರು ಸರಾಸರಿ ಗಂಟೆಯೊಂದಕ್ಕೆ ೫.೮ ಕಿಲೋ ಮೀಟರ್ ದೂರ ನಡೆಯುತ್ತಾರೆ; ಹೆಂಗಸರು ೫.೫ ಕಿಲೋಮೀಟರ್ ದೂರ ನಡೆಯು ತ್ತಾರೆ, ಎಂದು ಅಲ್ಲಿಯ ಪತ್ರಿಕೆ ತಿಳಿಸುತ್ತದೆ....ಆದರೂ, ಗಂಡಸರು ಸಿಕ್ಕಿಬೀಳುತ್ತಿರು ವುದು ಆಶ್ಚರ್ಯ.

* * *

"ಯು. ಎನ್. ಸಂಸ್ಥೆಯಲ್ಲದೆ ಪ್ರಪಂಚಕ್ಕೆ ಬೇರೆ ಗತಿಯೇ ಇಲ್ಲ" .... ನೊಂದ ಜಗತ್ತಿಗೆ ಹೀಗೆ ಹೇಳಿ ಮತ್ತೆ ಏಕೆ ನೋವನ್ನುಂಟುಮಾಡುತ್ತೀರಿ, ಮಹರಾಯರಿರಾ.

* * *

ಜನರಲ್ಲಿ ತ್ಯಾಗ ಬುದ್ಧಿ ಮೂಡದೆ ಇದ್ದರೆ, ಪಂಚವಾರ್ಷಿಕ ಯೋಜನೆ ಜಯ ಪ್ರದವಾಗುವುದಿಲ್ಲ ಎಂದು ಡಾ|| ವಿ. ಕೆ. ಆರ್. ವಿ. ರಾವ್ ಅವರು ತಿಳಿಸಿದರು.... ಸದ್ಯಕ್ಕೆ ಅವರು ಈ ಅಕ್ಷರಮಾಲೆಯನ್ನಾದರೂ ತ್ಯಜಿಸಬಾರದೆ?

* * *

ವೈದ್ಯರ ಕಾನ್‌ಫರನ್ಸ್ ಮುಗಿಯಿತು (ಸುದ್ದಿ) .... ಅದು ಸರಿ! ರೋಗಿಯ ಖಾಯಿಲೆ ಏನು, ಎಂಬುದನ್ನು ಈಗಲಾದರೂ ಪತ್ತೆಹಚ್ಚಿದರೊ?

* * *

ಭಂಡ ಗುಂಡ

ಸೊರಕ್ ಎಂದು ಮೂಗು ಎಳೆದು ಹುಬ್ಬು ಏರಿಸಿ ಸೆರಗು ಅಡ್ಡಗಟ್ಟಿ ವಯ್ಯಾರದಿಂದ ಲಟ್ಟಣಿಗೆ ಹಿಡಿದು ಕಿರುಮನೆಗೆ ಹೋದಳು ಕಾಂತಿಮತಿ.

ಎಲಾ ಇವಳಾ ಎಷ್ಟೊಂದು ಸೊಕ್ಕು ಈ ಹುಡುಗೀಗೆ ಗಂಡಾನ್ನೊ ಹೆದರಿಕೆ ಬೇಡವೆ, ದಸರಾ ಆಡಾಕ್ಷಣವೇನು ಸದರವಾಗಿರಬೇಕೆ? ಅಲ್ಲಾ ಗಂಡಾ ಅನ್ನಿಕೊಂಡ ಗಂಡ ಎದುರಿಗೇ ಕುಕ್ಕುರಿಸಿರುವಾಗ ಅದೂ ಮಾವನ ಮನೆಯಲ್ಲಿ ತನ್ನ ಮಾವನ ಮನೆಯಲ್ಲೀ ಈ ಪಾಟಿ ತಾತ್ಸಾರವಾದರೆ ಹೇಗೆ. ಮಾವನಿಗೆ ಹೇಳಲೆ?—ಛೆ, ಚಿಕ್ಕ ವಿಷಯ, ಗೊಂಬೆ ಇಡುವ ಸಡಗೆರ, ಉತ್ಸಾಹ, ಆತುರ, ಜಂಭಾ, ಸೊಕ್ಕು, ಸಹಜವೇ ಹುಡುಗಿಯರಿಗೆ ಈ ಗೊಂಬೆ ಇಡುವ ಸಡಗರದಲ್ಲಿ ಹಿಂದು ಮುಂದೇ ಪರಿಜ್ಞಾನವಿರುವುದಿಲ್ಲ.

—ಎಂದೆಲ್ಲಾ ಸಮಾಧಾನ ಮಾಡಿಕೊಂಡ ಗುಂಡೂರಾಯ.

ಗುಂಡೂರಾಯ ಹೆಂಡ್ತಿ ಊರಿಗೆ ಬಂದಿದ್ದ. ಶಾಲಾ ಮಾಸ್ತರು—ಕನ್ನಡ ಪಂಡಿತರು ಮಾವಯ್ಯ. ಅಳಿಯನ ನವ್ಯ ಕಾವ್ಯ ಓದಿ ಮಗಳನ್ನು ಕೊಟ್ಟಿದ್ದರು, ಕೆಟ್ಟ ಧೈರ್ಯದಿಂದ.

ಈ ನವ್ಯ ಸಾಹಿತಿಗೆ ಮಹಾ ಸೊಕ್ಕು. ತಾನು ಉದ್ದಾಮ ಪಂಡಿತ, ತನ್ನ ಹೆಂಡ್ತಿ ಅನುಪಮ ಸುಂದರಿ, ನಮ್ಮ ಜೋಡಿ ಬ್ರಹ್ಮಾ ಸರಸ್ವತಿಯರಂತಹ ಜೋಡಿ. ತನ್ನ ಮಾವನಂತಹ ಪರಮ ಪಂಡಿತರಿಲ್ಲಾ ಅನ್ನೋ ಸ್ವಭಾವ. ನಿಜಕ್ಕೂ ಮಾವ ಪರಮ ಪಂಡಿತರೆ, ಅವರಿಗೇನೂ ಅಳಿಯ ನವ್ಯ ಕವಿ ಎಂಬ ಹೆಮ್ಮೆ ಇರಲಿಲ್ಲ. ಅವರೂ ತಲೆ ತಾಕಿಸಿಕೊಂಡವರು, ಹೆಣ್ಣು ಹೆತ್ತವರು, ಗುಂಡೂರಾಯನ ಕಾವ್ಯವನ್ನು ನಂಬಿ ಅವರು ತಮ್ಮ ಕುವರಿಯ ಕರಿಯ ಕತ್ತನ್ನು ಅವನ ಮಾಲೆಯ ಪಾಲು ಮಾಡಿರಲಿಲ್ಲ. ಕವಿಯ ತೀರ್ಥರೂಪರ ಕೆರೆಯ ಕೆಳಗಿನ ಗದ್ದೆ, ಊರ ಹೊರಗಿನ ಹೊಲ, ಊರ ಒಳಗಿನ ಮನೆ ನೋಡಿದ್ದರು. ಕವಿಯ ಕಟ್ಟುಮಸ್ತಾದ ಅಂಗ ಸೌಷ್ಟ್ವ ನೋಡಿದ್ದರು, ಮತ್ತೆ ತಮ್ಮ ಕುವರಿಗೆ ಅವನೇ ತಕ್ಕವನೆಂದು ಕನುಕೊಂಟನಿ ಊದಿಸಿದ್ದರು.

ದಸರಾ ರಜಕ್ಕೇ ಊರಿಗೆ ಬಂದಿದ್ದ ಅಳೀಮಯ. ದೀಪಾವಳಿಗೆ ಬರುವುದು ಕಂಡಿದ್ದರು, ಏಕೆ—ಅವರೇ ಅವರ ಮಾವನ ಮನೆಗೆ ಹೋಗಿದ್ದರು. ಹಿಂದೊಮ್ಮೆ

ಹಳೆಯ ಕಾಲದಲ್ಲಿ ಕೆಂಪು ಮತಾಪಿನ ಬೆಳಕಿನಲ್ಲಿ ಹೆಂಡತಿಯ ಬಣ್ಣ ನೋಡಿ ಹಿಗ್ಗಿದ್ದರು. ಈ ಅಳಿಯ ದೇವರು ದಸರೆಗೇಕೆ ಬಂತು ?— ಎಂದು ಅವರ ವಯ್ಯಾ ಕರಣ ಮನೋವೃತ್ತಿ ತರ್ಕಿಸದೇ ಇರಲಿಲ್ಲ. ಗಂಟು ಮೋರೆಯಿಂದಲೇ ಅಳಿಯನ ಕೈಲಿದ್ದ ಗಂಟು ತೆಗೆದು ಮೂಲೆಗಿಟ್ಟಿದ್ದರು. "ಕಾಮಾಕ್ಷೀ....ನಿನ್ನ ಗಂಡ ಗುಂಡ ಬಂದಿದ್ದಾನೆ ನೋಡು" ಎಂದು ಕೂಗಿ ಹೇಳಿದ್ದರು.

ಆ ಕೂಗಿಗೆ ಉತ್ತರವಾಗೇ ಕಾಮಾಕ್ಷಿ ಕತ್ತು ಹಾಯಿಸಿ ಸೊರಕ್ ಎಂದು ಮೂಗು ಎಳೆದು, ಹುಬ್ಬು ಏರಿಸಿ, ವಯ್ಯಾರದಿಂದ ಗುಂಡನತ್ತ ನೋಡಿ ನಸುನಗುತ್ತಾ ಹೋದದ್ದು. ಆವಾಗಲೇ ಗುಂಡೂರಾಯ "ಏನು ಸೊಕ್ಕು ಇವಳಿಗೆ!" ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡದ್ದು.

ಭಾವಮೈದ ಭುಜಂಗ ಬಂದ. "ಭಾವಾ ಬೊಂಬಾಯಿ ಬೋಂಡ" ಎಂದ. ಗುಂಡನಿಗೆ ಬಾಯಲ್ಲಿ ನೀರೂರಿತು. ಎಂತಹ ಒಳ್ಳೆ ಅತ್ತೆಮ್ಮ ಅವರು. ಬರುವ ಅಳಿಯನಿಗೆ ಬೋಂಬಾಯಿ ಬೋಂಡ ಮಾಡಿ ಸ್ವಾಗತಿಸಿದ್ದಾರೆ. ಅವರೇ ವಾಸಿ.

"ಭುಂಜಗಾ–ಬೊಂಬಾಯಿ ಬೋಂಡವೆ?"

"ಹೂಂ–ಭಾವ"

"ಒಂದೇ ಒಂದು ಕದ್ದು ತಾ!"

"ಕದ್ದು ತಾ!— ನಾನೆಲ್ಲಿಂದ ಕದ್ದು ತರಲಿ ಭಾವಾ"

"ಅಡಿಗೇ ಮನೆಯಿಂದಾ"

"ಅಡಿಗೇ ಮನೇಲೆಲ್ಲಿದೆ ಭಾವಾ"

"ಮತ್ತಿನ್ನೆಲ್ಲಿದೆ ಭುಜಂಗಾ!"

"ಹೋಟ್ಲಲ್ಲಿ"

"ಹೋಟ್ಲಲ್ಲೀ...ನಾನು ಬಂದಿದ್ದೀನಿಂತ ಅತ್ತೆಮ್ಮ ಮಾಡಿಲ್ಲವೆ?—ನೀನು ಹೇಳಿದ್ದೆನೋ ಈಗ"

"ನಾನು ಹೇಳಿದ್ದು—ಭಾವಾ— ಬಹಳ ದಿನವಾಯ್ತು ಬೊಂಬಾಯಿ ಬೋಂಡ ತಿಂದೂ; ಕೊಡ್ಸೀಂತ ಅಂದೆ"

—ಗುಂಡೂರಾಯ ಸುಸ್ತು. ಅಷ್ಟೆ ಯೇಕೆ, ಈ ಭಾವಮೈದನ ಮಾತಿಗೆ ಕಡುಕೋಪ ಬಂತು ಗುಂಡನಿಗೆ. ಬರುವ ಮಾತೇ ಪಾಪ. ರಜಾಬಂತೂಂತ ಹೆಂಡ್ತಿ ಮುಖ ನೋಡೋಣಾಂತ ಬಂದರೆ ಅವಳು ಸೊಕ್ಕಿನಿಂದ ನೋಡಿ ಹೋದಳು. ಇನ್ನೂ ಈ Half wite ವು ಬ್ರದರ್ ಇನ್ ಲಾ ಬೊಂಬಾಯಿ ಬೋಂಡಾ ಅಂತ ಅಂದವನು ತನಗೇ ಕೊಡಿಸೆಂದು ಗಂಟು ಬಿದ್ದಿದ್ದ. ಮಾವನವರೂ ಸಿಡಿಮಿಡಿ

ಗುಟ್ಟುತ್ತಲೇ ಆಹ್ವಾನಿಸಿದ್ದರು ಅತ್ತೆಯವರ ಆತ್ಮೀಯತೆಯ ಆಹ್ವಾನ ಅವನಿಗೆ ಎಂದಿಗೂ ಇರಲಿಲ್ಲ.

ಗುಂಡು, ಭಂಡನ ಹಾಗೆ ಈಗ ಬರಬಾರದಾಗಿತ್ತು. ಕೇವಲ ಚಿಲ್ಲು ಚಿಲ್ಲು ಎಳೆ ನಿಂಬೆ–ಹಾಗೆ ವರ್ತಿಸಬಾರದಾಗಿತ್ತು. ಎಲ್ಲ ದಿನಗಳಂತೆ ಆ ದಿನ ಆಗಿದ್ದರೆ ಮಾವಯ್ಯ ಸಿಡಿಮಿಡಿ ಗುಟ್ಟುತ್ತಲೇ ಇರಲಿಲ್ಲ. ಪಂಡಿತರ ತಮ್ಮ ಮರುದಿನ ಬರುವವನಿದ್ದ. ಬಂದು ಮಾತಾಡುವವನಿದ್ದ. ಮಾತಾಡಿ ಕಾಡುವವನಿದ್ದ ಕಾಡಿ ತನ್ನ ಪಾಲಿನ ಬಾಬತ್ತು ಒರ ಬೇಕಿದ್ದ ಭಾಗ ಪಿತ್ರಾರ್ಜಿತ ಆಸ್ತಿ ಹಳೇಮನೆ ಮಾರಿದ ಹಣದ ವಸೂಲಿಗೆ ಬರುವವ ನಿದ್ದ. ಪಂಡಿತರು ಕೆಂಡಾಮಂಡಲವಾಗಿ ಅಳಿಯನೆದುರು ಕೂಗಾಡುವುದು ಹೇಗೆ? ಆ ಮನೆ ಮಾರಿದ್ದು ಈ ಗುಂಡನನ್ನು ಅಳಿಯನನ್ನಾಗಿ ಮಾಡಿಕೊಳ್ಳಲಿಕ್ಕೆ.

ಏನೋ ಪಾಪ ಕೈಲಾದ್ದು ಕೊಟ್ಟು ಧಾರೆ ಎರೆದು ಕೊಡೋಣವೆಂದು ತಮ್ಮ ಪಾಲಿನ ಹಣದಲ್ಲೇ ಕಲ್ಯಾಣ ನಡೆಸುವುದೆಂದು ಅಂದುಕೊಂಡಿದ್ದರು. ಮದುವೆ ಗೆಂದು ಮನೆ ಮಾರಿದ್ದರೂ ತಮ್ಮ ಪಾಲಿನ ಹಣದ ಜೊತೆ ತಮ್ಮನ ಪಾಲನ್ನೂ ಲಪಟಾಯಿಸುವ, ಗುಣವೇ ಅಲ್ಲ ಅವರದ್ದು. ದೇವರು ಮೆಚ್ಚುವ ಕೆಲಸವನ್ನೆ ಅವರು ಮಾಡುತ್ತಿದ್ದುದು.

ಈ ಗುಂಡ ಇದ್ದಾನಲ್ಲಾ—ತನ್ನ ಪ್ರಚಂಡತನ ಮಾವನ ಹತ್ತಿರ ಕಡೆತನಕಾ ನಡೆಸಬಹುದೆಂದು, ಬಗೆದಿದ್ದನೇನೊ. ಮದುವೆಯ ಸಮಯದಲ್ಲಿ ಅದೇನು ಅವನ ಆಟ ಅವನ ಹಟ, ಅವನ ರೋಷ, ಅವನ ಸೆಟೆಯುವಿಕೆ ಒಂದು ಸಲವಲ್ಲ—ಕಾಶಿ ಯಾತ್ರೆಯಿಂದ ಪ್ರಾರಂಭವಾದದ್ದು ಮೆರವಣಿಗೆಯ ತನಕ ಹಂತ ಹಂತವಾಗಿ ಕಾಡಿ ಸಿದ್ದ. ಧಾರೆಮುಹೂರ್ತಕ್ಕೆ ಬರಬೇಕಾದರೆ ಪಂಡಿತರಿಗೆ ತುಂಬಾ ತಾಪತ್ರಯ ಕೊಟ್ಟಿದ್ದ. ನಗದು ಸಾವಿರ ಕೊಡುವತನಕ ಹಸೆಮಣೆ ಹತ್ತಿ ತಾಳಿ ಕಟ್ಟುವುದಿಲ್ಲ ವೆಂದು ಮೊಂಡುತನ ಮಾಡಿತ್ತು ಅಳಿಯದೇವರು. ಕಾಮಾಕ್ಷಿಗೆ ಈ ವರ್ತನ ಸರಿ ಬೀಳಲಿಲ್ಲ. ಪಂಡಿತರು ತಮ್ಮನನ್ನು ಅಂಗಲಾಚಿ, ಈಗ ತಮ್ಮ ಸಹಾಯಕ್ಕೆ ಬರ ಬೇಕೆಂದೂ ಕೆಲವೇ ದಿನಗಳ ಕೆಳಗೆ ಮಾರಿದ, ಮನೆಯ ಬಾಬತ್ತು ಅವನಲ್ಲಿ ಹಣ ಇತ್ತು. 'ಕೊಡು–ಮಾನ ಬಚಾಯಿಸು' ಎಂದು ಕೇಳಿದ್ದು. ಅವನು "ಅಣ್ಣಾ ಅಪ್ಪಣೆ ಕೊಡು ಗಲ್ಲದಮೇಲೆ ಗುದ್ದಿ ಆ ಭಂಡ ಗುಂಡನನ್ನು ಹೊತ್ತು ತಂದು ಹಸೆ ಮಣೆ ಹತ್ತಿಸುತ್ತೇನೆ" ಎಂದು ಕೆಂಡಾಮಂಡಲವಾಗಿ ಹೇಳಿದ್ದು. "ಅಯ್ಯಾ ಅದು ಸುಲಭದ ಕೆಲಸ. ಮುಂದೆ ನಮ್ಮ ಹುಡುಗಿ ಆಜೀವಪರ್ಯಂತ ಅವನ ಕೈಯ್ಯಲ್ಲಿ ಬೆಯ್ಯ ಬೇಡವೇ; ಕಾಮಾಕ್ಷಿಯ ಹಿತನೋಡಿ ಅವನನ್ನು ಸಮಾಧಾನ ಮಾಡಬೇ ಕಾಗಿದೆ—ನನ್ನ ಮಾನಾ ಬಚಾವುಮಾಡು ಹಣ ಕೊಡು" ಎಂದು ಮದುವೆ ಆಯ್ತು ಎನ್ನಿಸಿದ್ದರು. ವೈಶಾಖ ಮಾಸದಲ್ಲಿ ಈ ಗಲಾಟೆ ನಡೆದು ಮತ್ತೆ ಭಾದ್ರಪದ ಮಾಸ ದಲ್ಲಿ ಕರೆಯದೆ ಕಳ್ಳನಗು ಬೀರಿ ಬಂದನಲ್ಲಾ ಈ ಭಡವ ಎಂತಹ ನಾಚಿಗೆ ಗೇಡು ಎಂದು ಚಿಂತಿಸಿದ್ದರು ಮಾವಯ್ಯ.

ಮದುವೆ ಗಲಾಟೆಯಲ್ಲಿ ಉರಟಣೆ— ಉಡುಗರೆ ಅಷ್ಟಕ್ಕಷ್ಟೆ ಆಗಿತ್ತು. ತಪ್ಪು ನಿಜ. ಗುಂಡ ದಸರಾಕ್ಕೆ ಬರಬಾರದಾಗಿತ್ತು—ದೀಪಾವಳಿಗೆ ಬಿಡಬಾರದಾಗಿತ್ತು. ಹೆಣ್ಣು ಹೆತ್ತವರನ್ನು ಕೇವಲ ನಾಲ್ಕು ತಿಂಗಳ ಕೆಳಗೆ ವಿಪರೀತ ಪೀಡಿಸಿದ ಅಳಿಯ ಯಾವ ಮುಖ ಇಟ್ಟು ಕೊಂಡು ಈಗ ಕರೆಯದೆ ಬಂದ? ನ್ಯಾಯವಾದ ಪ್ರಶ್ನೆಯೆ ತಾತ್ಸಾರ ತೋರಿಸಿದ್ದು ಮಾವನ ಮನೆಯವರ ತಪ್ಪಲ್ಲ.

"ಗುಂಡೂರಾಯ—ಯಾರು ಬರಹೇಳಿದ್ದರು ನಿನ್ನನ್ನ ಉದ್ದುದ್ದದ ಕಾವ್ಯ ಬರೆದೆಯಲ್ಲಾ, ನಿನ್ನ ಮದುವೆ ಸಂಭ್ರಮ ಕುರಿತು, 'ಅರಿಶಿನ ಗಲ್ಲದ ಚಲುವೆ ಕರಿ ಕಾಮಾಕ್ಷಿ' ಎಂದು ಕಿವಿಯಿಂದ ಕಿವಿತನಕ ಬಾಯಿ ಹಿಗ್ಗಿಸಿ ನಕ್ಕೆಯಲ್ಲಾ—ನಾಚಿಕೆ ಇಲ್ಲದೆ ಯಾಕೆ ಬಂದೆ?"

—ಹಿಂದು ಮುಂದು ನೋಡದೆ ನೇರವಾದ ಪ್ರಶ್ನೆ ಹಾಕಿದರು ಪಂಡಿತರು. ಗುಂಡ ತಬ್ಬಿಬ್ಬಾಡುವನೆಂದು ತಿಳಿದಿದ್ದರು. ಕವಿ ಹುಚ್ಚನಲ್ಲ. ಕೈಚೀಲದಿಂದ ಒಂದು ಪುಸ್ತಕ ತೆಗೆದು ತನ್ನದೊಂದು ನವ್ಯಕವಿತೆ ತೋರಿಸಿದ—ಓದಿದರು.

ಕಾಂಚನವೆ ಗತಿಯಾಯ್ತು
ಕುಹುಕ ವಿರಬಹುದು ಜೀಯ್ಯಾ||
ಕರಿಯ ಕಾಮಾಕ್ಷಿ ನೇರಿಳೆ ಹಣ್ಣು
ಕಾಗುಣಿತ ಬಾರದ ಮೆಳ್ಳಿ ಹೆಣ್ಣು||
ಕಾಡದೆಯೆ ಕೊಂಡೊಯ್ವೆ
ಕಾನನ ಕಲ್ಲ ಕಾನ್ ಕಾನ್ ಪಳ್ಳಿಗೆ||

—ಪಂಡಿತರಿಗೆ ಅಳಬೇಕೋ ನಗಬೇಕೋ ಅರ್ಥವಾಗಲಿಲ್ಲ. ಬಿರುಸಾಗೇ ಹೇಳಿದರು "ದೀಪಾವಳಿಗೆ ಬರಬೇಕೋ ಗುಂಡೂರಾಯಾ—ದಸರಾಕ್ಕಲ್ಲ ಅರ್ಥವೇ" ಎಂದು ನೇರವಾಗೇ ತಿಳಿಸಿದರು.

ಶಾಂತತೆಯಿಂದ—ಏಕೈಕ ಚಿತ್ತತೆಯಿಂದ, ಗಂಭೀರಭಾವ ಗರ್ಭಿತ ಮುಖ ಭಾವದಿಂದ ನೋಡಿ, ಮತ್ತೆ ಚೀಲದಿಂದ ಇನ್ನೊಂದು ತುಂಡು ಕಾಗದ ತೋರಿಸಿದ.

"ಕೋಪವೆಂಬುದನರ್ಥ ಸಾಧನ
ಕೋಪವೇ ಸಂಸಾರ ಬಂಧನ
ಕೋಪದಿಂದುರು ತರದ....||"
ಪಂಡಿತರು ಓದಿದರು.—

"—ಪಂಡಿತರಿಗೇ ಪಾಠ ಹೇಳಿಕೊಡುವಂತಾದೆಯಾ ಪಾಪಿ, ನಿನ್ನ ಪದ್ಯದ ಪ್ರದರ್ಶನ ಸಾಕು" ಎಂದೆನ್ನುವಾಗ ಅತ್ತೆಮ್ಮ ಮೊಗಚೆಕ್ಕೆ ಹಿಡಿದು ಬಂದರು.

ಗುಂಡ ಅಧೀರನಾಗಲಿಲ್ಲ. ಅದೇ ಶಾಂತ ಮುದ್ರೆಯಿಂದ ಮತ್ತೊಂದು ಪದ್ಯ ಅವರ ಮುಂದೆ ಹಿಡಿದ.

"ಮಂದಮತಿ ನಿಂದಿಸಲು
ಮನಕದ ತಂದು ಕೊಳ್ಳದ
ನರನು ಜಾಣನು...."

—ಪಂಡಿತರು ನಖಶಿಖಾಂತ ಉರಿದು ಬಿದ್ದರು. ಇದೆಲ್ಲಿಯ ಪ್ರಾರಬ್ಧ ತಮ್ಮ ಕುವರಿಗೆ ಗಂಟು ಬಿತ್ತೆಂದು ಬೆಚ್ಚಿದರು. ಹುಚ್ಚೆ? ಬೆಪ್ಪೆ? ಇಲ್ಲವೆ ಶಿವಲೀಲೆಯೆ? ಪಿತ್ತವಿಕಾರವೆ? ಎಳೆ ನಿಂಬೆಯೆ? ಯಾವುದಿದು ತಮ್ಮ ಕಾಂತಿಮತಿಗೆ ಸಿಕ್ಕ ಮೃಗ ಶಿರ? ಎಂದು ವಿಲಿ ವಿಲಿ ಒದ್ದಾಡಿದರು. ರೇಗಿದರೆ ಪ್ರಯೋಜನ ವಿಲ್ಲವೆಂದು ಭುಜಂಗನನ್ನು ಕರೆದರು. "ಭುಜಂಗಾ ಭಾವನನ್ನು ಆಡಿಸು" ಎಂದು ಹೆಂಡ್ತಿ ಸಹಿತ ಮುಂದಿನ ಪಿತೂರಿಗೆ ಒಳಸಂಚು ನಡೆಸಲು ಅಡಿಗೆ ಮನೆಗೆ ಹೋದರು, ಮಗಳು ಮುಗುಳುನಗೆ ನಕ್ಕಳು.

"ಭಾವಾ ಬೊಂಬಾಯಿ ಬೋಂಡ"

"ಬಾಯಿ ಮುಚ್ಚೊ ಭಡವ.. ಭುಜಂಗಾ.... ಮರ್ತಿದ್ದೆ. ಕಾಂತಿಮತಿಗೆ ಹೇಳು—ಅವಳು ಸಂಜೆಗೆ ನನ್ನ ಜೊತೆ ವಾಕಿಂಗ್ ಬರುವವಳು"

"ಇದು ನಿನ್ನ ಸರ್ವಾಧಿಕಾರ ನಡೆಯೋ ಸಾಮ್ರಾಜ್ಯವಲ್ಲ ಗುಂಡಾ—ಸಂಪ್ರದಾಯಸ್ತರು ನಾವು, ನಿಷೇಕಕ್ಕೆ ಮುಂಚೆ ಅದಾಗದು–ಇದು ತೀರ ಚೆಲ್ಲು ಚೆಲ್ಲು ಬಡಿಯುವ ವಿಚಾರವಲ್ಲ, ಈ ಕ್ಷಣ ನೀನು ಬಂದ ದಾರಿ ಹಿಡಿ. ನಮ್ಮ ನೂರು ತಾಪತ್ರಯದ ಮಧ್ಯೆ ನೀನು ಮೂಗು ಹಾಯಿಸಬೇಡ...." ಎಂದು ದೊಡ್ಡ ಕಟ್ಟಿಗೆ ಹಿಡಿದು ಕೆಂಗಣ್ಣಿನಿಂದ ಬಂದರು ಒಳಗಿನಿಂದ ಪಂಡಿತರು.

ಗುಂಡನ ಗುಂಡಿಗೆ ಹಾರಲಿಲ್ಲ. ಮತ್ತೊಂದು ಪದ್ಯ ತೆಗೆದು ತೋರಿಸೇ ಬಿಟ್ಟ–
"ಮೂರ್ಖಂಗೆ ಬುದ್ಧಿಯನು ನೂರ್ಕಾಲ ಹೇಳಿದರೆ"
ಗೋರ್ಕಲ್ಲ ಮೇಲೆ ಮಳೆಸುರಿಯಲು॥

—ಪಂಡಿತರಿಗೆ ತಲೆ ತಿರುಗಿದಂತಾಯಿತು, ಹಾಗೇ ಒರಗಿದರು. ಸಂಜೆಯಾಗಿತ್ತು—ಮುಸುಕು ಮುಸುಕಾಗಿ ಕಂಡಿತು. ಕಾಂತಿಮತಿ ಕೈಹಿಡಿದು ಗುಂಡ ವಾಕಿಂಗ್ ಹೊರಟದ್ದು. ಅಂದುಕೊಂಡರು ಪಂಡಿತರು. ಭಂಡರಿಗೇ ಕಾಲವಿದು ಎಂದು. ಅವರ ಹೆಂಡ್ತಿ ಅಂದರು—ಕಾಂತಿಮತಿಯೇ ಮೊದಲು ಹೊರಟಿದ್ದೆಂದು. ಗುಂಡ ತೋರಿಸಿದ ಒಂದೊಂದೇ ಪದ್ಯ ಹಾದು ಹೋಯಿತು ಪಂಡಿತರ ಮುಂದೆಯಲ್ಲಿ.

—ದಾಶರಥಿ ದೀಕ್ಷಿತ್.

ಸಾಲಾಸ್ತ್ರ ಪ್ರಯೋಗ

ಕ್ಲಬ್‌ನಲ್ಲಿ ನನ್ನ ಪಾಡಿಗೆ ನಾನು ಆಗಸ್ಟ್ ೧೫ರ ವಿಶೇಷ ಸಂಚಿಕೆಯಲ್ಲಿ ಬಂದಿದ್ದ ಜಾಹಿರಾತುಗಳನ್ನು ತಿರುವಿ ಹಾಕುತ್ತ, ಒಂಟಿ ಸೋಫಾದಲ್ಲಿ ಕೂತಿದ್ದೆ.

ನನ್ನ ಪಕ್ಕದಲ್ಲಿದ್ದ ಜಂಟಿ ಸೋಫಾಕಡೆ ತಿಮ್ಮರಾಯ ಅವನ ಸ್ನೇಹಿತ ಸೋಮಣ್ಣ ಇಬ್ಬರೂ ಬೇಗ ಬೇಗ ಬಂದು ಅದರೊಳಕ್ಕೆ ಕುಸಿದು ಕೂತರು. "ಸೋಮೂ! ಸದ್ಯಃ ನೀನು ಆ ಭೂತದಿಂದ ಬದುಕಿಸಿದೆ....ಆಗ ನೀನು ಓಡೋಡಿ ಬಂದು, ಯಾರೋ ನನ್ನನ್ನ ಫೋನ್‌ನಲ್ಲಿ ಕೂಗುತ್ತಿದಾರೆ, ಅಂತ ಹೇಳದೆಹೋಗಿದ್ದರೆ, ನನ್ನನ್ನ ಅವನು ತಿಂದುಹಾಕಿಬಿಟ್ಟಿರುವನು! ಕಪಿಮುಷ್ಟಿ ಅವನದು. ಜಿಗಣೆ ಅಂಟಿದ ಹಾಗೆ ಅಂಟಿಬಿಡುತ್ತಾನೆ. ಅವನ ಆ ಹಾಳು ಪುರಾಣ ಯಾರಿಗೆ ಬೇಕಾಗಿದೆ. ಹಿಡಿದು ನಿಲ್ಲಿಸಿದ ಅಂದರೆ ಜಪ್ಪಯ್ಯ ಅಂದರೂ ಬಿಡುವುದಿಲ್ಲ. ಐದು ನಿಮಿಷದಲ್ಲಿ ಹೇಳಬಹುದಾದ ಕಥೆಗೆ ಐವತ್ತಾದರೂ ತೆಗೆದುಕೊಳ್ಳುತ್ತಾನೆ. ನನ್ನ ಕಿವಿಯೊಳಕ್ಕೆ ಅರ್ಧ ಗಂಟೆಯಿಂದ ಸುರಿಯುತ್ತಿದ್ದ, ಸೋಮೂ, ಅವನ....ರೇಡಿಯೋ....ಮೊನ್ನೆ ಹುಟ್ಟಿದ ಕೂಸು....ಅಪ್ಪೆನ್‌ಡಿಸೈಟೀಸ್ ಆಪರೇಷನ್....ಅಡಿಗೆಯವಳ ವ್ಯಭಿಚಾರ ....ಥೂ .. ನನಗೇಕೆ ಆ ಕಗ್ಗ ಎಲ್ಲಾ...." ಎಂದ ತಿಮ್ಮರಾಯ, ಸಿಗರೇಟ್ ಹಚ್ಚುತ್ತ.

"ನೋಡಿದೆ, ನಿನ್ನ ಅವಸ್ಥೆಯನ್ನು....ಮುಳುಗುತ್ತಿದ್ದವನಿಗೆ ಸಿಕ್ಕಿದ್ದೇ ದೋಣಿ, ಅಂತ ಟೆಲಿಫೋನ್ ನೆಪ ತೆಗೆದೆ....ಅಂತು, ಬಚಾವಾದೆಯಲ್ಲಾ, ಅದೇ ತೃಪ್ತಿ ನನಗೂ" ಎಂದ ಸೋಮಣ್ಣ.

"ಅವನ ಕೈಗೆ. ಅಲ್ಲ....ಬಾಯಿಗೆ ಸಿಕ್ಕಿಬಿಟ್ಟರೆ, ಉಳಿಗಾಲವೇ ಇಲ್ಲ."

"ಪ್ರಾರಂಭದಲ್ಲೇ ಚಿವುಟಿಬಿಡಬೇಕು....ತಪ್ಪಿಸಿಕೊಳ್ಳಬೇಕು... ನುಣಿಚಿ...."

"ಅದು ಹೇಗಪ್ಪ? ನನಗೊಂದೂ ತೋಚುವುದಿಲ್ಲ"

"ಬೇಕಾದಷ್ಟು ಉಪಾಯಗಳಿವೆ....ಬುದ್ಧಿವಂತರಿಗೆ ನೂರು ದಾರಿ ತೋರುತ್ತದೆ"

"ಒಂದು ಹೇಳಿಕೊಡಯ್ಯ, ಸೋಮು."

"ಆಗಲಿ! ನಮ್ಮ ಇಂದ್ರು ಗೊತ್ತಿಲ್ಲವೆ? ಇಂದ್ರು....?"

"ವಿಜಯೇಂದ್ರ?"

"ಹುಂ! ಅವನದೊಂದು ತಂತ್ರ ಇದೆ....ಅದನ್ನ ನೀನೂ ಅನುಸರಿಸಬಹುದು ಆ ಭೂತದಿಂದ ತಪ್ಪಿಸಿಕೊಳ್ಳುವುದಕ್ಕೆ....ಅಂಥವರು ಯಾರಾದರೂ ಹಲ್ಲುಕಿರಿಯುತ್ತ, ಕೈ ನೀಡಿಕೊಂಡು ಬಂದರು ಅನ್ನು, ಇಂದ್ರು ಎದುರು. ಆ, ಊಂ, ಅಂತ ಒಂದು ನಿಮಿಷ ಅವರೊಂದಿಗೆ ಸರಸವಾಡುತ್ತ, ಆ ಪ್ರಾಣಿ ಯಾವುದಾದರೂ ತನ್ನ ಸ್ವಂತ ಸಂಕಟ ಸಮಾಚಾರ ತೆಗೆದ ಅಂದ್ರೆ ಸರಿ, ತಕ್ಷಣವೇ, ಅದಿರಲಿ, ಒಂದು ಹತ್ತು ರೂಪಾಯಿ ತುರುತ್ತಾಗಿ ಸಾಲಬೇಕಾಗಿತ್ತಲ್ಲಾ, ಕೊಡುತ್ತೀಯಾ, ಅಂತಾನೆ.... ಭೂತ ಪೆಚ್ಚಾಗುತ್ತದೆ. ಮುಖ ಸಪ್ಪಗಾಗುತ್ತದೆ. ಇಂದ್ರುವನ್ನು ಅಲ್ಲೀ ಬಿಟ್ಟು, ಬೇರೊಂದು ಪಶುವನ್ನು ಹುಡುಕಿಕೊಂಡು ಕ್ಲಬ್ಬಿನ ಇನ್ನೊಂದು ರೂಮಿಗೆ ತೊಲಗುತ್ತೆ" ಎಂದ ಸೋಮು.

"ಚೆನ್ನಾಗಿದೆ"

"ಚೆನ್ನಾಗಿಲ್ಲದೆ ಏನು? ಸಿದ್ಧಾಂತಥ ಇಂಥ ಭಂಡರ ಬಾಲ ಮುರಿಯಲು.... ಇಂದ್ರುವೇ ಹೇಳಿದ ನನಗೆ, ಹಾಗಂತ" ಎಂದ ಸೋಮು. "ಪರೀಕ್ಷೆಮಾಡು ಮುಂದಿನ ಸಲ" ಎಂದು ಪ್ರೋತ್ಸಾಹಿಸಿದ. "ಬಾ! ಕಾಫಿ ಕುಡಿಯೋಣ" ಎನ್ನುತ್ತ ತಿಮ್ಮರಾಯನನ್ನೂ ಎಳೆದುಕೊಂಡು ಅತ್ತ ಕಡೆ ಹೊರಟ.

"ಪರವಾ ಇಲ್ಲ, ಒಳ್ಳೆಯ ಉಪಾಯ" ಎಂದು ನಾನೂ ಸಂತೋಷಪಟ್ಟೆ. ಪತ್ರಿಕೆ ನೋಡುತ್ತ ಕೂತೆ, ಅಲ್ಲೇ.

ವಿಜಯೇಂದ್ರ ಬಂದ, ನಾನು ಕೂತಿದ್ದ ರೂಮಿಗೆ...."ಹಲೋ!" ಹಲೋ!" ....ಯಥಾಪ್ರಕಾರ ಆಯಿತು, "ಎಲ್ಲ ಸೌಖ್ಯವೋ?" ಎಂದೆ. "ಇವತ್ತು ಬೆಳಗ್ಗೆ ಮಳೆ ಒಂದು ಹದ ಬಿದ್ದದ್ದು...." ಎಂದ. "ಹೌದು, ಅದರಿಂದ ಹವಾ ತುಂಬ ತಂಪಾಯಿತು ...ನಿನ್ನೆ ಮೊನ್ನೆ ಎಲ್ಲ ಇಷ್ಟು ಹೊತ್ತಿನಲ್ಲಿ ಇಲ್ಲಿ ಹೀಗೆ ಕೂಡುವುದ ಕ್ಕಾಗುತ್ತಿತ್ತೆ?" ಎಂದೆ, ನಾನು ಔಪಚಾರಿಕವಾಗಿ.

ಆಗ ಇಂದ್ರು, "ಅದಿರಲಿ! ತುರುತ್ತಾಗಿ, ಒಂದು ಹತ್ತು ರೂಪಾಯಿ ಬೇಕಿತ್ತಲ್ಲಾ ...ಸಾಲ....ಕೊಟ್ಟಿರುತ್ತೀರಾ?" ಎಂದ.

ಎಲಾ! ಪಾಪೀ! ಅರ್ಧ ಮುಕ್ಕಾಲು ಗಂಟೆ ಎಡೆಬಿಡದೆ ಅವನನ್ನ ನಾನು ಬೋರು ಮಾಡುತ್ತೇನೆ, ಎಂಬ ಭಯ ಅವನಿಗೆ ಬರುವ ಹಾಗೆ ನಾನೇನೂ ಹೇಳದೆ ಇದ್ದರೂ, ತನ್ನ ತಂತ್ರವನ್ನ ಆಗಲೇ ನನ್ನ ಮೇಲೆ ಪ್ರಯೋಗ ಮಾಡಿದನಲ್ಲಾ, ಅಂತ ನನಗೆ ಕೋಪ ಬಂತು...." ಇಲ್ಲ, ನನ್ನ ಹತ್ತಿರ ರೂಪಾಯಿಲ್ಲ" ಎಂದೆ. ಅವನಿಂದ ನಾನು ತಪ್ಪಿಸಿಕೊಂಡೆ, ಅಂತ ನಾನು; ನನ್ನಿಂದ ತಾನು ತಪ್ಪಿಸಿಕೊಂಡೆ, ಅಂತ ಅವನು.

—ಶ್ರೀ ಕಾಮತ್.

ಕೇಶವಯ್ಯ ಸಿಕ್ಕಿದಾಗ

ಕೇಶವಯ್ಯನವರ ಕೂಡೆ ಮಾತನಾಡುವುದೆಂದರೆ ಯಾರಿಗಾದರೂ ಖುಷಿಯಾಗ ಬೇಕು. ಅಗೋ....ಅವರೇ ಬರುತ್ತಿದಾರೆ!

"ಬನ್ನಿ ಸ್ವಾಮಿ ಕೇಶವಯ್ಯನವರೆ! ಇದೇನು ಇಷ್ಟು ಬೇಗನೆ ಪಾರ್ಕ್ ಕಡೆಗೆ ಹೊರಟುಬಿಟ್ಟಿರಿ!"

"ಜೂಬ್ಲಿ ಪಾರ್ಕ್ ಕಡೆಗಲ್ಲಾರಿ....ಪೇಟೆಗೆ ಹೋಗಬೇಕಾಗಿತ್ತು; ಅದಕ್ಕೆ ಬೇಗನೆ ಬಂದೆ ರ್‍ಯಾಲಿ ಸೈಕಲ್‌ನಲ್ಲಿ"

"ಸರಿ....ರ್‍ಯಾಲೆಯಲ್ಲೇ ಬಂದಿರಿ ...ಡೈನಮೋ ಚೆನ್ನಾಗಿದೆ. ಆದರೆ ಇದೇನು ಈ ರೀತಿ ಬೆವರು ಕಿತ್ತುಕೊಂಡು ಬಿಟ್ಟಿದೆ!"

"ಹುಂ....ಬಲಿ ಬೆವರು .. ಮನೆಯಿಂದ ಬರ್ತಾ ಬೆಳ್ಳಿ ಬಟ್ಟಲಲ್ಲಿ ಎರಡು ಬಟ್ಟಲು ಬಿಸಿ ಬಿಸಿ ಕಾಫಿ ಬಸಕೊಂಡೆ ಕಣ್ರೀ"

"ಓ ಹಾಗೇನು! ಅಂದ ಹಾಗೆ, ನಿಮ್ಮ ಮಗನಿಗೆ ಸೀಟು ಸಿಕ್ತೇನು?"

"ಎಲ್ಲಿಂದಾರಿ!....ಸಿಕ್ಕ ಸಿಕ್ಕ ಕಡೇಗೆಲ್ಲ ಬರೀತಿದೀನಿ—ಪಾರ್ಕರ್ 51 ತೊಗೊಂಡು...."

"ತ್ಸ ತ್ಸ ತ್ಸ"

"ಕ್ಷಮಿಸಿ....ಕೊಂಚ ಮುಂದಾಗಿ ಹೋಗ್ತೀನಿ ಪೇಟೆ ಕಡೆಗೆ ...ಕೋಟಿನ ಬಟ್ಟೆ ತೊಗೋಬೇಕು....ಲಾಲಿಮ್ಲಿ ಬಂದಿದೆ ಸೀಬಯ್ಯನಂಗ್ಡೀಲಿ"

"ಯಾವಂಗ್ಡಿ?"

"ಸೀಬಯ್ಯನಂಗ್ಡಿ....ನಾನು ಮೊನ್ನೆ 'ಫುಳಿಪ್ಸ' ರೇಡಿಯೋ ಕೊಂಡು ಕೊಂಡ್ನಲ್ಲಾ, ಆ ಅಂಗ್ಡಿ ಪಕ್ಕದಂಗ್ಡಿ!"

"ಓಹೋ! ತಿಳೀತು....ನೀವು ಮುಂದಕ್ಕೆ ಹೋಗಿ ಕೇಶವಯ್ಯನವರೆ....ನಮಸ್ಕಾರ"

ನೋಡಿದಿರಾ! ಐದೇ ನಿಮಿಷದಲ್ಲಿ ಕೇಶವಯ್ಯನ ವಿಚಾರ ನಿಮಗೆಷ್ಟೊಂದು ತಿಳೀತು! ಅವರ ಸೈಕಲು ರ್‍ಯಾಲೆ, ಪೆನ್ನು ಪಾರ್ಕರ್ 51, ಅವರು ಕಾಫಿ ಕುಡಿಯೋ ಬಟ್ಟಲು ಬೆಳ್ಳೀದು, ಅವರ ರೇಡಿಯೋ 'ಫುಳಿಪ್ಸು, ಕೋಟು ಲಾಲಿವ್ಲಿ ಮಾತ್ರವಲ್ಲದೆ ನಮ್ಮೂರಿನ ಪಾರ್ಕು 'ಜೂಬಳಿ'.... ಇತ್ಯಾದಿ ಇತ್ಯಾದಿ.

ಪುರುಸೊತ್ತಿಲ್ಲದೆ ಹೋಯಿತು; ಇಲ್ಲದೆ ಇದ್ದಿದ್ದರೆ ಇನ್ನೂ ನಾಲ್ಕು ವಿಚಾರಗಳ ಕುರಿತು ಕೇಳಿರೋವೆ, ಕೇಶವಯ್ಯನವರನ್ನ. "ಮೈಸೂರಿಗೆ ಹೋಗಿದ್ರಂತಲ್ಲ, ಯಾವತ್ತು ಬಂದ್ರಿ? ಅಂತ ಕೇಳಿದ್ದರೆ ಇಂಥಾ ದಿವಸ, ಇಂಥಾ ಟ್ರೈನಿನಲ್ಲಿ ಬಂದೆ— ಸೆಕೆಂಡ್ ಕ್ಲಾಸಿನಲ್ಲಿ" ಅನ್ನುತ್ತಿದ್ದರು.

"ಕೇಶವಯ್ಯನವರೇ, ನಿಮ್ಮಗನಿಗೆ ರಜಾ ಸಿಕ್ತೇಂನ್ರೀ?" ಅಂತ ಕೇಳಿದ್ದಕ್ಕೆ ಅವರು "ಸಿಕ್ತು ಕಣ್ರಿ. ಅವನ ಮ್ಯಾನೇಜರು ಡಿಲ್ಲಿಗೆ ಹೋಗಿದ್ದವನು ನೆನ್ನೆ ಬಂದ ನಂತೆ-ಸೂಪರ್ ಕಾನ್ಸ್‌ಟಲೇಷನ್‌ನಲ್ಲಿ ಬಂದವನೇ ರಜಾ ಸಾಂಕ್ಷನ್ ಮಾಡಿದ"— ಅಂದಿದ್ದರು ನಿನ್ನೆ.

ಹೀಗೆ ಕೇಶವಯ್ಯನವರನ್ನ ಯಾವುದರ ಕುರಿತು ವಿಚಾರಿಸಿದರೂ ನಿರೀಕ್ಷಿಸಿದ್ದ ಕ್ಕಿಂತ ಹೆಚ್ಚಿನ ಮಾಹಿತಿ ದೊರೆಯುಬಹುದೇ ಹೊರತು, ಅಸೆಂಬ್ಲೀಲಿ ಮಂತ್ರಿಗಳು ಕೊಡುತ್ತಾರಲ್ಲ ಆ ಥರದ ಅರೆಮನಸ್ಸಿನ, ಕಾಲು ಮನಸ್ಸಿನ, ರೂಪಾಯಿಗೆ ಒಂದಾ ಣೆಯ ಉತ್ತರಗಳು ದೊರೆಯುಲಾರವು. "ಕಣ್ಣೇನು ಕೆಂಪಾಗಿದೆ?" ಎಂದು ಕೇಳಿ. ಕೇಶವಯ್ಯ ಕನ್ನಡಕದ ಗಾಜಿನ ನಂಬರು ಫ್ರೇಮಿನ ಮೇಕು, ಇತ್ಯಾದಿಗಳನ್ನು ಮೊದಲೇಟಿಗೇನೆ ತಪ್ಪದೆ ತಿಳಿಸುತ್ತಾರೆ.

ಕೆಲವರಿದ್ದಾರೆ; ಏನಾದರೊಂದು ವಿಚಾರ ಕೇಳಿದರೆ ಬಾಯಿಗೆ ಬಂದಿದ್ದನ್ನೆ ಗೊಣಗಿಬಿಟ್ಟು ನಿರಾಶೆಗೊಳಿಸುತ್ತಾರೆ.

"ಹೊಸ ಟೈ! ಯಾವತ್ತು ಕೊಂಡೆಯೋ, ಎಲ್ಲಿ ಕೊಂಡು ಕೊಂಡೆ, ಎಷ್ಟು ಕೊಟ್ಟಿದೀಯ?"-ಎಂದು ನಮ್ಮ ವೆಂಕಟೂನ ಕೇಳಿದರೆ ಆತನ ಉತ್ತರ ಇಷ್ಟೆ "ಎಲ್ಲೋ ಕೊಂಡ್ಕೊಂಡೆ ಕಣಯ್ಯ, ಎಷ್ಟು ಕೊಟ್ಟೆನೋ ಮರೆತು ಹೋಗಿದೆ." ಇದ ರಿಂದ ನಮಗೆ ಏನು ತಿಳಿದಹಾಗಾಯಿತು? ಇಂಥ ಜನಗಳೇ ಲೋಕದಲ್ಲಿ ಬಹಳ. ಅದೇ ನಮ್ಮ ಕೇಶವಯ್ಯನ್ನ ಕೇಳಿ-ಟೈ ಸಮಾಚಾರವನ್ನೆಲ್ಲಾ ತಿಳಿಸಿ, ಅದಕ್ಕೆ ಚುಚ್ಚಿದ ಪಿನ್ನಿನ ಕುಲಗೋತ್ರವನ್ನೂ ಹೇಳಿ, ಟೈಗೆ ಕಾಸುಕೊಡುವಾಗ ತನ್ನ ಇಂಥ ಮೇಕಿನ ಪರ್ಸಿನ ಪ್ರಸ್ತಾಪವನ್ನೂ ಮಾಡುತ್ತಾರೆ.

ನಿಮಗೆ ಇಷ್ಟರಲ್ಲೇ ತಿಳಿದಿರಬಹುದು ಕೇಶವಯ್ಯ ಅನುಕೂಲಸ್ಥರು ಸಂಪ ತ್ತುಳ್ಳವರು-ಎಂದು. ನಿಜ ಆದರೆ ಅವರ ಮಾತಿನ ಗತ್ತಿಡೆಯುಲ್ಲ-ಅದು ಅವರ ನಿಜವಾದ ಸಂಪತ್ತು....ಅಗೋ ಹಿಂದೆ ಬಂದುಬಿಟ್ಟರಲ್ಲ! ...

"ಏನ್ಸಾರ್ ಅಂಗಡೀಗೆ ಹೋಗಲಿಲ್ಲವೆ? ಇದೇನು ಹಿಂದಕ್ಬಂದ್ರಿ"

"ಬರಬೇಕಾಯಿತು, ರೀ, ಮನೆಯಿಂದ ಬರ್ತಾ ಟ್ರಿಜರಿ ಬಾಗಲು ತೆರೆದಿಟ್ಟು ಬಂದಿದೀನಿ.... ಲಾಕ್ ಮಾಡೋಕೆ ಮರತೇ ಹೋಯ್ತು!"

"ಟ್ರಿಜರಿಗೆ!"

"ಹೂಂ ಟ್ರಿಜರಿಗೆ.... ಗಾಡ್ರೆಜ್ ಟ್ರಿಜರಿಗೆ"

"ಸರಿ ಸರಿ. ಈವಾಗ ತಿಳೀತು. ಬೇಗ್ನೆ ಹೋಗಿ ಸದ್ಯ!"

ಕಂಡಿರಾ!

—ರಾಮಕೃಷ್ಣ



"ಅಪ್ಪಾ ಅಪ್ಪಾ, ಆ ದೊಡ್ಡ ಬೊಂಬೆ ಕೊಂಡ್ಕೊಳ್ಳೋಣಪ್ಪ!"

ಅರಾಸೆಯ ಒಸಗೆ

ಕಾಫಿ ಬಟ್ಟಲ ತುಂಬು! ಹೊತ್ತಾಯ್ತು
ನಿನ್ನೆ ನಾಳೆಯು ಸಾಲಕೀಗ ಹೆದರದಿರು
ಇಂದು ಕುಡಿಯೋಣ ಸಖಿ, ನಾಳೆಯೆಂಬೆಯೊ? ನಾಳೆ
ಬಂದು H ಬಾಂಬ್ ಸಿಡಿಯೆ, ಎಲ್ಲಿರುವೆ ನೀನು? —೧—

ತಾ ಜೀವನಾಮೃತವ! ನರಕ ಸ್ವರ್ಗಗಳ ಮರೆ
ಕಾಫಿಕುಡಿ, ಕುಡಿಯದಿರೆ ಜೀವ ಹಾರುವುದು
ಜೀವ ಹಾರುವುದು ದಿಟ. ಉಳಿದಮಾತೆಲ್ಲ ಸಟೆ
ನ್ಯಾಟೊ, ಸೀಟೊಗಳೆಲ್ಲ ಬರಿಯ ತರಲೆ —೨—

ಈ ಹಳೆಯ ಮೀನುಸಂತೆಯಲಮಮ ಇಸಮುಗಳು
ಸರ್ಕಾರ, ಅಪೊಸಿಷನೆಂಬ ಕಟ್ಟೆಯಲಿ
ಬಂದು ನಿಂದಿರ್ದು ನಾಟ್ಯವನಾಡಿ ತೆರೆಯೆಳೆದು
ಸಂದೇಹದಲಿ ದೂಡಿ ಹಾರಿ ಹೋಗಿಹವು —೩—

ಸರಿ! ಬಂದರೇನಂತೆ ಈ ಎಲ್ಲ ಸಂದೇಹ
ಬೂರ್ಜುವಾ, ಶ್ರಮಜೀವಿಗಳ ಸುದ್ದಿಯೇಕೆ?
ಐಕ, ಸಿಂಗ್ಮನರು ಕುಣಿಯಲಿ, ಟಿಂಗ, ಹೋಚಿಗಳು
ಮಲಟ, ಮಾಲೆಂಕರನು ಕೂಡಿ ಕೊಳಲಿ —೪—

ಬಯಲಾಸೆ ಗಳಿಗೊಂದು ನಿಮಿಷವಿದು, ಜೀವನದಿ
ರಸದೊರತೆ ಒಂದೆ ಚಣ! ಕಾಫಿ ಕುಡಿವಾಗ!
ತಾರೆಗಳು ಕುಣಿಯುತಿವೆ, ಸಿನಿಮ ಷೋ ಹೊತ್ತಾಯ್ತು
ಥೇಟರೋ ಬಹುದೂರ ತಡಮಾಡದೇಳು —೫—

ಈಗಿನೀ ಸರಕಾರ ಪಾರ್ಲಿಮೆಂಟಿನಲಿಂದು ಚರ್ಚಿಪುದು
ಅದನಂಬಿ ನಾವು ಕುಳಿತಿಹೆವು
ನಂಬದಿರು ಅದು ನಿನಗೆ ಕೆಲಸ ಕೊಡಿಸುವುದೆಂದು
ಸ್ಕ್ಯಾಂಡಲುಗಳದರಲ್ಲಿ ತುಂಬಿ ತುಳುಕುತಿವೆ. —೬—

ಸುಮ್ಮ ನಿದ್ದವ ಗೊಂದು ಬಿ. ಎ. ಡಿಗ್ರಿಯ ಕೊಟ್ಟು
ಅವನ ತಲೆ ಬುದ್ಧಿಯೆಲ್ಲವ ಹಿಡಿದು ಸುಟ್ಟು
ಕೆಲಸ ಸಿಗದಿರಲವನು ಕಮ್ಯುನಿಸಮನು ಸೇರೆ
ಹಿಡಿದು ಜೈಲಿಗೆ ನೂಕಿ ಹಿಂಸಿಪುದು ತರವೆ? —೭—

P S C. ಕುಳಿತಲ್ಲಿ ಕೆಲಸವಿಲ್ಲದ ನರರ
ಹಿಡಿದು ಲಗ್ಗೆಯು ಚಂಡ ನಾಡುತಿಹನು
ನೂರೆಂಟು ಅರ್ಜಿಯನು ಹಣದೊಡನೆ ಸ್ವೀಕರಿಸಿ
ಹರಿದು ಪುಟ್ಟಿಯು ಕಸವ ಪೇರಿಸುತಲಿಹನು. ೮—

ಕಾಫಿ ಕುಡಿದುನ್ಮತ್ತನಾಗಿಹೆನು ನಾನೀಗ
ಕೆಲಸವಿಲ್ಲದೆ ಕಾಲುದಾರಿಯುಲೆಯುವೆನು
ಬಯ್ಯುವರೆ ಜನರೆಲ್ಲ, ಬೈದರೇನಂತೀಗ
ಕಾಫಿ ಗೆರಡಾಣೆಯನು ಕೊಡುವರವರೇನು? —೯—

ನಿಜ ಜಗದಿ ನಾನು ಪೂಜಿಸಿದೆಲ್ಲ ಪ್ರತಿಮೆಗಳು
ಜನದ ಕಣ್ಣಿನಲೆನ್ನ ನಿಳಿಕೆ ಗೈದು
ಸಿನಿಮಗೀತೆಯು ಕೊಟ್ಟು, ಸಿಗರೇಟ ತಂದಿಟ್ಟು
ಕಾಫಿಯನು ಕುಡಿಸಿ, ಕಾಲೇಜ ಬಿಡಿಸಿದವು. —೧೦—

ಬಾಲ್ಯದಲಿ ನಾನಂದು ಕಾಲೇಜಿನೊಳಗಿರಲು
ಕೇಳಿ ಪ್ರೊಫೆಸರುಗಳೆಲ್ಲರ ಬುರುಡೆಗಳನು
ಪೀಸಿಯುಮ್ಮಿನಲಿ ಪಲ್ಟಿಯ ಹೊಡೆದು, ಹಿಂತಿರುಗಿ
ಬೆಂಗಳೂರಿಂ ಬಂದೆ ಮಂಗನಾಗಿ. —೧೧—

ಮತ್ತೆ ಸೆಪ್ಟಂಬರಿಗೆ ಕೂತೆ, ಅಲ್ಲಿಯು ಸೋತೆ
ಬರಿದಾಯ್ತು ಜೇಬು, ಬರಡಾಯ್ತು ಬುದ್ಧಿ
ಕತ್ತೆಯಾದೆನು ಬಳಿಕ ಹೊಳೆಯಿತೆನಗೀ ಸತ್ಯ
ಕಾಫಿ ಪುಡಿಯೊಲು ಬಂದೆ ಚರಟದೊಲು ಪೋಪೆ. —೧೨—

ಉದ್ದಗಲ ಆಳದ ತ್ರಿಗಾತ್ರದೀ ವಿಶ್ವವಿದು
ಕಾಲದ ಚತುರ್ಥ ಗಾತ್ರದಲಿ ಸಂಚರಿಪ
4-Dೀ ಚಲಚ್ಚಿತ್ರ, ಡೈರೆಕ್ಟ 'ರಿಲ್ಲಪ್ಪ'
ನಾನೆ ಹೀರೋ! ಮುಗುದೆ, ನೀನೆ ಹೀರೋಯಿನ್! —೧೩—

ಬಾ! ಅರಾಸೆಯ ಜೊತೆಗೆ, ಸಖಿ, ನಿರಾಶೆಯ ತೊರೆದು
ಬೋರಗಳೆಯೀ ವಿಶ್ವವನ್ನು ಗಣಿಸದಿರು
ಹೀರಿಕಾಫಿಯ, ಮೀರುವಾನಂದದಲಿ ಬೆರೆದು
ಜೀವನವ ನನುಭವಿಸು, ಮರೆತು ಚರ್ಚೆಯನು. —೧೪—

—ಅ. ರಾ. ಸೇ.

ಚಿತ್ರಪಟದ ಸಮಸ್ಯೆ

ಹುಡುಗರ ತಲೆ ಕೆಡಿಸುವವರು ನಾವೇ, ದೊಡ್ಡವರೆನಿಸಿಕೊಂಡಿರುವವರು. ಆಗಸ್ಟ್ ೧೫ರಂದು ಇದು ಎಲ್ಲೆಲ್ಲೂ ವಿಪರೀತವಾಗಿ ಬೆಳೆದು, ಅವಾಂತರಕ್ಕಿಟ್ಟು ಕೊಳ್ಳುತ್ತದೆ. ದೇಶಾಭಿಮಾನ ತ್ಯಾಗ ಭವ್ಯಭಾರತದ ನಿರ್ಮಾಣ ರಾಷ್ಟ್ರಪಿತಾ ಎಂದೆಲ್ಲ ಅವತ್ತು ನಮ್ಮೂರಲ್ಲೂ ಹತ್ತಾರುಕಡೆ ಕೂಗಿದರು. ನಮ್ಮ ಗುಂಡಪ್ಪ ಆ ಪೈಕಿ ಮೂರು ಉತ್ಸವಗಳಲ್ಲಿ ಹಾಜರಿದ್ದ. ಸಂಜೆ ಮನೆಗೆ ಬರುವಾಗ, ತನ್ನ ಡಿಕ್ಷನರಿಯನ್ನು ಮಾರಿ, ದೊಡ್ಡದೊಂದು ಗಾಂಧಿ ಚಿತ್ರ – ಚೌಕಟ್ಟು ಸಹಿತ – ಮನೆಗೆ ತಂದ.

ಮಹಾತ್ಮರ ಭಾವಚಿತ್ರ ಮನೆಯಲ್ಲಿರಬೇಕಾದದ್ದು, ಎಲ್ಲರ ಮನೆಯಲ್ಲೂ ಇದೆ, ಅದನ್ನು ಆಗಾಗ ನೋಡುತ್ತ, ನೋಡಿದಾಗಲೆಲ್ಲ ಕೈಮುಗಿದು ಅಡ್ಡ ಬೀಳುತ್ತ, ಓಡಾಡಿದರೆ, ಮೈಗೆ ಒಳ್ಳೆಯದು; ಗೋಡೆ ಮೇಲಿಂದ ಗಾಂಧಿಜಿಯವರು ಹರಸುತ್ತಿದ್ದರೆ, ಮನೆ ತುಂಬ ಅಹಿಂಸೆಯ ಪರಿಮಳ ಹರಡುತ್ತದೆ:- ಎಂದೆಲ್ಲ ಹುಡುಗ ಲೆಕ್ಚರ್ ಕೊಟ್ಟ. ಮೊಳೆ ಸುತ್ತಿಗೆ ಸಹಿತ, ಅದನ್ನ ಯಾವ ರೂಮಲ್ಲಿ ನೇತಾಡಿಸುವುದು, ಎಂದು ಹುಡುಕಾಡಿದ.

ದೇವರ ಕೋಣೆಯಲ್ಲಿಡಬೇಕು, ಎಂದಳು ನಮ್ಮ ತಾಯಿ. ಮಹತ್ಮಾಜಿ ದೇವರ ಅವತಾರ, ಮೈಲಿಗೆ ತಗುಲಬಾರದು, ಸಿಕ್ಕ ಸಿಕ್ಕಿದವರು ಚಪ್ಪಲಿ ಬೂಟ್ಸು ತೊಟ್ಟು ಬರುವಕಡೆ ಅವರ ಪಟ ಇಡಬಾರದು, ಎಂದು ಅವರು ವಾದಿಸಿದರು. ಅಲ್ಲಿ, ಇಡಲೇಬಾರದು, ಎಂದಳು ನಮ್ಮ ಅಜ್ಜಿ. ದೇವಸ್ಥಾನದೊಳಕ್ಕೆ ಅಂತ್ಯಜರನ್ನು ನೂಕಿಸಿದವನು, ಎಂಬುದು ಆಕೆಯ ಕೋಪಕ್ಕೆ ಕಾರಣ. ಹುಡುಗರು ಓದುವ ರೂಮಿನಲ್ಲಿರಲಿ, ನನ್ನ ಅಭ್ಯಂತರವೇನೂ ಇಲ್ಲ ಎಂಬುದು ಆಕೆಯ ಅಭಿಪ್ರಾಯ.

ಅಡಿಗೆಮನೆಯಲ್ಲೇ ನಾನು ಹೆಚ್ಚು ಹೊತ್ತು ಕಳೆಯುವುದು, ಆದ್ದರಿಂದ ಅಲ್ಲೇ ಹಾಕಬೇಕು, ಎಂದ ಪುಟ್ಟಶೀನು. ದೇವರ ಕೋಣೆಯೂ ಅಡಿಗೆಮನೆ ಮೂಲೆಯಲ್ಲಿದ್ದುದರಿಂದ ನಮ್ಮ ತಾಯಿ ಅದಕ್ಕೆ ಒಪ್ಪಿದರು. ಆದರೆ, ನನ್ನ ದೊಡ್ಡ ಮಗಳು ಅನ್ನಪೂರ್ಣಾ ರಂಪ ಎಬ್ಬಿಸಿದಳು. ಗಾಂಧಿಯೇ ಭಾರತ ಭಾಗ್ಯವಿಧಾತಾ! ನಮಗೆಲ್ಲ ಅನ್ನ ಬಟ್ಟೆ ಕೊಟ್ಟು ಕಾಪಾಡುವ ಸುಖೀ ರಾಜ್ಯದ ಸ್ಥಾಪಕ; ರಾಮರಾಜ್ಯದ ಕನಸನ್ನು ನನಸುಮಾಡಿದವರು .... ಆದ್ದರಿಂದ, ಉಗ್ರಾಣದಲ್ಲೇ ತೂಗು ಹಾಕೊ, ಎಂದಳವಳು. ಗುಂಡಪ್ಪನಿಂದ ಚಿತ್ರವನ್ನು ಸೆಳೆದು ಅವಳು ಸುತ್ತಿಗೆ ಸಹಿತ ಅತ್ತ ಓಡಿದಳು.

ಅಪ್ಪನೇ ಮನೆಗೆ ದುಡಿದು ಸಂಪಾದಿಸುವ ಮೂಲಸ್ತಂಭ. ಸಾವಿರ ಸುಳ್ಳು ಹೇಳಿ, ಸಂಸಾರ ನಿರ್ವಹಿಸುತ್ತಿದ್ದಾನೆ. ಇದು ಶುದ್ಧ ತಪ್ಪು. ನಾಚಿಕೆ ಕೆಟ್ಟು, ಆತ್ಮಾಭಿಮಾನ ಕಳೆದುಕೊಂಡು, ಮೋಸದ ಬಾಳು ಬಾಳುತ್ತಿದ್ದಾನೆ. ಆದ್ದರಿಂದ, ಅಪ್ಪನ ಟೇಬಲ್ ಮೇಲುಗಡೆ ಗಾಂಧಿ ಚಿತ್ರವಿರಬೇಕು, ಮೋಹನದಾಸರ ಮೋಹನ ವದನವನ್ನು ನೋಡಿ ತಲೆತಗ್ಗಿಸಿ ಜೀವನ ಪಥವನ್ನು ಉತ್ತಮಗೊಳಿಸಲಿ, ಎಂದು ಗುಂಡಪ್ಪ, ಅವಳಿಂದ ಆ ಚಿತ್ರವನ್ನು ಪುನಃ ಎಳೆದು ಪಡೆದ. ಬಹಿರಂಗ ಸಭೆಗಳಲ್ಲಾಗುವ ಭಾಷಣಗಳಿಂದ, ಹುಡುಗರ ಭಾಷಾವೈಖರಿ ಅಂದವಾಗುತ್ತಿದೆ, ಒಪ್ಪಿದೆ. ಆದರೂ, ಅಪ್ಪನಮೇಲೆ ಮಕ್ಕಳನ್ನು ಎತ್ತಿಕಟ್ಟುವ ಈ ಭಾಷಣಕಾರರ ತಂತ್ರ ಸರ್ವಥಾ ಒಪ್ಪತಕ್ಕದ್ದಲ್ಲ.

ನನಗೆ ರೇಗಿತು .... ಈ ಹೀಚನ್ನು ಹೀಗೆಯೇ ಬೆಳೆಯಲು ಬಿಟ್ಟರೆ, ಪ್ರಹ್ಲಾದನಂತೆ ಇವನು ಅಪ್ಪನನ್ನೇ ಸೀಳಿಸಿಬಿಟ್ಟಾನು, ಎಂದು, ಮೆಲ್ಲಗೆ ಟೇಬಲ್ ಹತ್ತಿರದಿಂದ ಎದ್ದೆ. ಗುಂಡಪ್ಪನ ಗಾಂಧಿಭಕ್ತಿಯನ್ನು ಹತೋಟಿಯಲ್ಲಿರಿಸದೆ ಹೋದರೆ, ನನ್ನ ಕಸಬಿಗೇ ಕುತ್ತ ಎಂದು ತೋರಿತು ನನಗೆ.

ಐದೂಕಾಲು ರೂಪಾಯಿಕೊಟ್ಟು ತಂದಿದ್ದ, ಗುಂಡಪ್ಪ! ೩೬ ಅಂಗುಲ ಉದ್ದ, ೩೦ ಅಂಗುಲ ಅಗಲ, ... ದೊಡ್ಡ ಸೈಜು. "ಲೋ! ಗುಂಡಪ್ಪ! ಇಂತಹ ಭಾರಿ ಚಿತ್ರವನ್ನು ...ಇಂತಹ ಜಗದ್ವಿಖ್ಯಾತ ಮಹಾಪುರುಷನ ಚಿತ್ರವನ್ನು... ಆತ್ಮಾಭಿಮಾನ ದೇಶಾಭಿಮಾನ ಧರ್ಮಾಭಿಮಾನಗಳನ್ನು ಬಿತ್ತಿ ಬೆಳೆಸಿದ ಮಹಾತ್ಮರ ಚಿತ್ರವನ್ನು, ಈ ಬಾಡಿಗೆ ಮನೆಯಲ್ಲಿ ಇರಿಸುವುದು ಚೆನ್ನಿಲ್ಲ....ಸುಮ್ಮನೆ ಆ ಮಂಚದ ಕೆಳಗೆ ಮಲಗಿಸಿರು ... ನಾಳೆ ಎನೇ ತ || ಸೈಟುಗಳ ಹರಾಜಿದೆ. ಒಂದು ಸೈಟು ಕೊಂಡುಕೊಂಡು, ಇದನ್ನು ಇಡುವಷ್ಟು ಸುಂದರವಾದ ಮನೆಯೊಂದರ ಪ್ಲಾನ್ ಒರೆಯಿಸಿ, ಹೌಸ್ ಬಿಲ್ಡಿಂಗ್ ಸೊಸೈಟಿ ಸಾಲ ಪಡೆದು....ಬೇಡ, ಬೇಡ, ಕೂಡದು, ಕೂಡದು... ಸಾಲಮಾಡಿ ಮನೆ ಕಟ್ಟಿದರೆ, ಗಾಂಧಿ ಒಪ್ಪುವುದಿಲ್ಲ ...

ನನ್ನ ಉಪನ್ಯಾಸ ಮುಗಿಯುವುದರೊಳಗೆ ಗುಂಡಪ್ಪ ಗೋಳೋ ಅಂತ ಅಳುವುದಕ್ಕೇ ಪ್ರಾರಂಭಿಸಿಬಿಟ್ಟ .. ನನ್ನ ಟೇಬಲ್ ಮೇಲುಗಡೆಯೇ ಅದನ್ನು ತೂಗುಹಾಕಬೇಕೆಂಬುದು ಅವನ ಹಟ.

ಅಲ್ಲಿ ಇರಿಸಿದರೆ, ನಾನು ಸಿಗರೇಟು ಸೇದುವ ಹೊಗೆ ಮಹಾತ್ಮರ ತನಕ ಏರುತ್ತದೆ, ಅದರಿಂದ ಕುಲಕ್ಕೇ ನಾಶವೆಂದು ಆಜ್ಞೆ. ಅಪ್ಪ ಸಿಗರೇಟು ಸೇದುವಾಗ ಕುರ್ಚಿಯನ್ನು ಬಲಗಡೆಗೆಳೆದು ಕಿಟಕಿಯ ಹತ್ತಿರ ಕುಳಿತು ಹೊಗೆಯನ್ನು ಹೊರಕ್ಕೆ ಬಿಡಲಿ, ಎಂದ ಗುಂಡಪ್ಪ. ಇಲ್ಲ, ಅಲ್ಲೇ ಕೂತು ಸಿಗರೇಟ್ ಹಚ್ಚುವಾಗೆಲ್ಲ, ಹೊಗೆಯನ್ನು ನುಂಗೇ ಬಿಡಲಿ, ಎಂದ ಪುಟ್ಟಶೀನು. ಹೇಗಿದೆ, ಹುಡುಗರ ಮೆದುಳು? ನಾನು ಪುಟ್ಟಶೀನು ಕೆನ್ನೆಗೆ ಬಲವಾಗಿ ಒಂದು ಏಟು ಬಿಗಿದೆ.

ಆಗ, ನನ್ನವಳು ರಂಗ ಪ್ರವೇಶಮಾಡಿದಳು. ಮೇಜಿಗೆ ಎದುರಾಗಿರುವ ಗೋಡೆಯೇ ಸರಿ, "ಸಿಗರೇಟನ್ನೂ ಸೇದಬಹುದು, ಆದರೆ, ಸ್ವದೇಶಿ, ಅಪ್ಪಟ ಸ್ವದೇಶಿ, ಖದ್ದರ್ ಸಿಗರೇಟೇ ಆಗಬೇಕು, ಎಂದು ಅವಳು ಒಂದು ಅಸಾಧ್ಯ ಸಲಹೆಯನ್ನು ಕೊಟ್ಟಳು!

ನಾವೇ ಸಂಪಾದಿಸಿ ನಾವೇ ಉಳಿಸಿ ನಮ್ಮದೇ ಸೈಟಿನಲ್ಲಿ, ಗಾಂಧಿಚಿತ್ರ ಇರಿಸಲು ಯೋಗ್ಯವಾದ ಮನೆ ಒಂದನ್ನು ಕಟ್ಟುವತನಕ, ಅದರ ಗೃಹಪ್ರವೇಶ ಸಮಾರಂಭದ ದಿನ ಬರುವತನಕ, ...ಎಂದು ನಾನು ಹಳೆಯ ರಾಗವನ್ನೇ ಎಳೆದೆ.

ಆದರೆ, ನನ್ನ ಮಾತು ಕೇಳುವವರು ಯಾರು? ಮನೆಯವರೆಲ್ಲರೂ, ಸತ್ಯಾಗ್ರಹ ಹೂಡುವುದೇ ಅಪ್ಪನನ್ನು ದಾರಿಗೆ ತರಲು ತಕ್ಕ ಉಪಾಯ ಎಂದು ನಿರ್ಧರಿಸಿದರು. ನನ್ನ ತಾಯಿ ಅಡಿಗೆಮನೆಗೆ ಅಡ್ಡಲಾಗಿ ಮಲಗಿ, ಚಿತ್ರವನ್ನು ಅಲ್ಲೇ ಇಡಬೇಕೆಂದು ಕೂಗಿಕೊಂಡಳು. ಅಲ್ಲಿ ಅದನ್ನು ಇರಿಸುವತನಕ, ಏಳುವುದಿಲ್ಲವೆಂದಳು ಹುಡುಗರು ಓದುವ ರೂಮಲ್ಲೇ ಮಡಗಬೇಕೆಂದು ಅಲ್ಲಿಗೆ ಹೋಗಿ, ಕಾಲು ಚಾಚಿದಳು, ಅಜ್ಜಿ. ಅನ್ನಪೂರ್ಣಳಂತೂ ಉಗ್ರಾಣದಲ್ಲಿ ಝಾಂಡಾ ಊರಿದಳು ಇಲ್ಲೇ ತೂಗೋ, ಇಲ್ಲೇ ತೂಗೋ, ಎಂದು ಒಂದೇಸಮನೆ ಕೂಗಿದಳು, ಅಲ್ಲಿಂದಲೇ.

ಆಗ ಪುಟ್ಟಶೀನುವಿಗೆ ಜ್ಞಾನೋದಯವಾಯಿತು. 'ಕೂಸಿನ ತೊಟ್ಟಿಲಲ್ಲೇ ಇರಿಸಿಬಿಡೋಣ, ಸತ್ಯ ಅಹಿಂಸೆಗಳನ್ನು ಚಾಚೂತಪ್ಪದೆ ನಮ್ಮ ಮನೆಯಲ್ಲಿ ಪಾಲಿಸುತ್ತಿರುವುದು ಕೂಸೊಂದೇ ಎಂದು ಆ ಚಿಕ್ಕ ಹುಡುಗನ ತಲೆಯಲ್ಲಿ ಹೊಳೆದದ್ದು ನೋಡಿ ನನಗೆ ಆಶ್ಚರ್ಯವಾಯಿತು.

ಈ ರಾದ್ಧಾಂತದಿಂದ, ನಾನೂ ಕೊಂಚ ಇಳಿದೆ. ಲೋ, ಗುಂಡಪ್ಪ! ಮನೆಯ ಹೊರಬಾಗಿಲಾಚೆ, ಒಳಕ್ಕೆ ಬರುವ ಪ್ರತಿ ಒಬ್ಬರಿಗೂ ಕಾಣಿಸುವ ಹಾಗೆ, ಬೀದಿಯಲ್ಲಿ ಹೋಗುವ ದಾರಿಗರಿಗೆಲ್ಲ ಮಹಾತ್ಮರ ಸ್ಮರಣೆ ಬರುವ ಹಾಗೆ, ಹೊಸಲಲ್ಲೇ ಹೊಡೆಯೋಣ ಎಂದೆ. ಅಲ್ಲಿ ಮಳೆ! ಬಿಸಿಲು! ಸಾಲದುದಕ್ಕೆ ಬಲ್ಬು! ಮನೆ ಒಳಗಿರುವವರಿಗೆ ಸ್ಫೂರ್ತಿ ಬರಲಿ, ಎಂದು ನಾನು ತಂದೆ, ಇದನ್ನ! ಬೀದಿಯಲ್ಲಿ ಹೋಗುವವರಿಗೆ ನೆನಪು ಬರಲಿ, ಎಂದಲ್ಲ. ಇಲ್ಲಿಗೆ ನೀನೇ ಮುಖ್ಯಸ್ಥ, ನಿನಗೆ ಸ್ಫೂರ್ತಿ ಬಂದರೆ, ನಮಗೆಲ್ಲ ಅದರ ಪ್ರಯೋಜನ ಉಂಟು, ಎಂದು ಅವನು ನನ್ನ ಕಾಲು ಹಿಡಿದುಕೊಂಡು ನೆಲದಲ್ಲಿ ಮಲಗಿ ಸತ್ಯಾಗ್ರಹ ಹೂಡಿದ.

ಬಂದ ಕೋಪದಲ್ಲಿ, ಕಾಲು ಝಾಡಿಸಿದೆ. ಗುಂಡಪ್ಪನ ಕೈಯಲ್ಲಿದ್ದ ಪಟ ದೂರ ಚಿಮ್ಮಿ ಗೋಡೆಗೆ ತಗುಲಿ ಚೂರು ಚೂರಾಯಿತು. ಗಾಜಿನ ತುಂಡೊಂದು ಗಾಂಧಿಜಿಯ ಬಲಗಣ್ಣಿಗೆ ತಾಕಿ, ಕಾಗದವನ್ನು ಹರಿಯಿತು.

ಚಿತ್ರವನ್ನು ಎಲ್ಲಿ ತೂಗುಹಾಕಬೇಕೆಂಬ ಉಗ್ರಸಮಸ್ಯೆ ಬಗೆಹರಿಯಿತು.

—ನಾ. ಕ.

ನವ್ಯ ಗದ್ಯ

(ಹೈಡ್ರೋಜನ್ ಬಾಂಬ್)

ವನು, ವೆ, ಪಾಟಾಳಿಮುರಿ ನವ್ಯಗದ್ಯಬರೆ.

ಅಣೋರಣೀಯಾ; ಬಿಳಿಗಡ್ಡಜಟಿ; ಬಹುಹೆಡ್ಡ ನುಡಿದು, ಕಡಿದ ಕಡಲೆಯು; ಮೂರ್ಖ! ಜೇರು, ಗಡ್ಡೆ, ಬಿಕಿನಿನಡುಗಡ್ಡೆ, ಹೆಣದಗುಡ್ಡೆ. ರೇಡಿಯೋ ಆ್ಯಕ್ಟಿವ್ ಮಾನವತೆ ಇನ್ಯಾಕ್ಟಿವ್, ಎಂದೊರಲೆ; ಏಕ ಸೈಕತಸುತ್ತ ಸಾಗರದ ವಾರಿಯಲಿ ಉದ್ಯಾನ ವನವ ನಿರ್ಮಿಸಿದ. ಅವನಿಯದಿರಿತು; ಗಗನ ತಾರಾನಿವಹ ಬಿರಿದಿತ್ತು; ಮುದುರಿತು ಮನಸ್ಸು; ಕೋವಾಡಿಸ್ ಡೊಮೈನ್ ಎಂದನು ನರಗುರಿ ತಮ್ಮಣ್ಣಂ. ಬೊಮ್ಮತಿಮ್ಮರು ಮುರುಕು ಗೋಡೆಯಿಂ ಮನೆಕಟ್ಟೆ; ತನ್ನ ಚಿಂತೆಯದೊಂದು, ದೈವದ ಭಿನ್ನ ಮೋನದ ಸಂದು. ವಿದರ್ ಹೋಮಿಯೋ ಸೇಪಿಯನ್ಸ್?

ಹತ್ತಿ ದಾರವನ್ನುಮಾಡಿ, ಬಿಲ್ಲಿಗೆ ಬಾಣವನ್ನು ಹೂಡಿ, ಹುಡುತಿಯಾಡಿದ ಮಂಗರ್ ನೆಲನ ದಾನವಮಾಡಿ, ಉಪವಾಸವನ್ನು ಹೂಡಿದರು. ನಾಟಕ, ಬೂಟಕ, ಝುಗ್ಗನಡುವಿನಲಿ ಕುಬ್ಲಾ ಖಾನನ ಸ್ಟೇಟ್ಲೀ ಗುಮಟ ಡಿಕ್ರಿ; ಕವಿಯ ಕಲ್ಪನೆಯ ಕಾಣದ ಹಕ್ಕಿಯ ರೆಕ್ಕೆ ಹರಿಯಿತು. ಕ್ರಾಂತಿ ಭ್ರಾಂತರು ಸಂತೆಯಲಿ ನಿಂತರು. ಸ್ಟ್ರಾಸ್ ಯಾಂಕಿ ಯೂನೊ, ಇಕೆಫೆ, ಯೂನೆಸ್ಕೊ, ಮೂಳೆಮುರಿಯುವ ಕೊಂಕಾಡಿದನು. ಜಗನ್, ನಗೀಬ್, ಮೊಸದಿಕ್, ಜಾನ್, ಗೋಬರ್ಟರು ಪದ ಚ್ಯುತರ್ ಬೊಂಬಡಿ ಬಡಿಯೆ ಕೆಂಪು ಕೋಟೆಯ ಗಾಡಸೆ ಲಹರಾಯೆಜಾ; ಯೊಷೀಢಾ ಪೂರ್ವಾರ್ ಷಾಢ, ಬುಲ್, ನಿಲ್, ನಿಲ್, ಕಲ್ ತೆಗೆದು ಬಡಿವರ್.

ಸೋಬೆ, ವಿಷಗಾಳಿ ಸೋಕೆ, ಬಿರುಬಿಸಿಲ ಸೆಕೆಯಲಿ, ಇಲ್ಲ ಯಾರ ಬುದ್ಧಿಯು ಓ. ಕೆ. ನಾಲ್ಕು ನೂರು ಪೌಂಡಿನ ಚಂಡಾಳ ಚೌಕುಳಿ; ಕಣ, ರಣರಣ ಸ್ವಪ್ರಕಾಶವ ಬೀರಿ ಸರ್ವವನು ನುಂಗುತ್ತಿವೆ. ಕ್ರೆಮ್ಲಿನ ಅಡುಗೆಮನೆ, ಬಕಿಂಗ್ ಹ್ಯಾಮ್ ನಡುಮನೆ ವೈಟ್ ಹೌಸ್ ಅಂಗಳಗಳಲಿ, ವಿಜ್ಞಾನ ವ್ಯಭಿಚಾರ; ರೋಸೆನ್‌ಬರ್ಗ್ ಓಂ. ಜೋಲಿಯೊಟ್ ಹರಹರ. ಶಿಂತಾಕರಾಳ, ಕರಾಳಜನಕ; ಭಯ ಭೀತಿ ಕ್ರೋಧಂ ಸ್ವಾಹಾ. ಜಟ್ಟನಿಟಲಾಲೋಲಕೀ ರಾಕ್ಷಿ ದಳ್ಳಿಸಿತು ಭೀತಿ ಬೇತಾಳ.

ಹೇಳದಿರು ಹೋರಾಡಿ ಫಲವಿಲ್ಲವೆಂದು; ನಮೇ ಕರ್ಮಾಣಿ ಲಿಂಪಂತಿ; ಬುದ್ಧಂ ಶರಣಂಗಚ್ಛಾಮಿ; ಇಲ್ಲೂ ಸಲ್ಲರು ಅಲ್ಲೂ ಕಳ್ಳರು. ಪೆಡಂಭೂತ ಬಂತು, ವಾಷಿಂಗ್ಟನ್ನಿನಿಂದ, ತತಃ ಕಿಂ! ತತಃ ಕಿಂ! ಜಲಜನಕ, ಛಲಮನಕೆ ನೀರ ಬಿಟ್ಟು ಸೋರಿಸಿತು ನರಕವನು.

ಅರುಣೋದಯ ಝಾಲಾ, ರಾತ್ರಿ ಪ್ರಭಾತಿಲ, ಕೌರವ ಕುಂಭೀಪಾಕ ಕೊತ ಕೊತನೆ ಕುದಿದು. ಜಗದ ಸರ್ವಂ ರೇಡಿಯೋ ಆ್ಯಕ್ಟಿವ್ ಆಥೆ. That ever this should be!

ಕೋಳಿಯನು ಕೇಳದಲೆ ಸಂಬಾರ ಅರೆಯದಿರು; ಮರಿಕೋಳಿ ಹೋರಿ ಕಮ್ಯೂನಿಸ್ಟಾದೀತು

—ಅ. ರಾ. ಸೆ.

ಯಾರಾದರೇನು ?

ಆತನೊಬ್ಬ ಗೃಹಸ್ಥ. ತನ್ನ ಮಡದಿಯೊಡನೊಡಗೂಡಿ ಸುಖವಾಗಿ ಜೀವನ ನಡೆಸಿ ಬರುತ್ತಿದ್ದ. ಮಡದಿಯೊಡನೊಡಗೂಡಿ ಹತ್ತು ವರುಷಗಳು ಕಳೆದಿದ್ದುವು. ಈಚೆಗೆ ಆತನಿಗೆ ಮಡದಿಯಲ್ಲಿ ತುಸ ಬೇಸರ ಮೂಡಿತು. ತಾನು ಸಂಜೆ ಮನೆಗೆ ಬರುವಾಗ ನಿತ್ಯವೂ ಒಬ್ಬ ಚೆಲುವೆಯನ್ನು ನೋಡುತ್ತಿದ್ದ. ಅಂದುಕೊಂಡ—ಯಾರೋ ಕಾಲೇಜುಕುವರಿ ಎಂದು. ಆ ತರುಣಿ ನಿತ್ಯವೂ ಒಬ್ಬ ತರುಣನೊಡನೆ ಅದೇ ಹಾದಿಯಲ್ಲಿ ಗಾಳಿಸಂಚಾರಮಾಡುವ ವಾಡಿಕೆ. ಆದರೆ ಪ್ರತಿದಿನ ಬೇರೆ ಬೇರೆ ತರುಣರ ಜೊತೆಯಲ್ಲಿ ಹೋಗುತ್ತಿದ್ದುದನ್ನು ನೋಡಿ ತಾನೂ ಒಂದುದಿನ ಜೊತೆಯಲ್ಲಿ ಹೋಗಬೇಕೆಂದುಕೊಂಡ. ಹಾಗೆಯೇ ನಿರ್ಧರಿಸಿದ. ಒಂದುದಿನ ತರುಣಿ ತರುಣ ನಿಲ್ಲದೆ ಬಂದಳು. ಆತ ಒಡನೆಯೇ ಅವಳಲ್ಲಿಗೆ ಹೋಗಿ ಪ್ರೇಮಭರಿತ ನಯನಗಳಿಂದ ದೃಷ್ಟಿಸಿದ. ಆಕೆಯೂ ಆತನಮೇಲೆ ಕನಿಕರಗೊಂಡು ತನ್ನ ಪುಟ್ಟ ಕಿಶೆಯಿಂದ ಒಂದು ತಾಮ್ರದ ನಾಣ್ಯವನ್ನು ತೆಗೆದು ಆತನ ಕೈಲಿ ಹಾಕಿ "ಹೋಗು-ಕಡಲೆಪುರಿ ಕೊಂಡು ತಿನ್ನು ಹೋಗು" ಅಂದು ತಲೆಯೆತ್ತಿ ಮುಂದೆ ನಡೆದಳು.

ಆತ ತಲೆಬಾಗಿಸಿ ಮನೆಗೆ ಬಂದ. ಮಡದಿಯನ್ನು ಕೂಗಿದ – ಬರಲಿಲ್ಲ. ಎದುರು ಗೋಡೆಗೆ ನೇತುಹಾಕಿದ್ದ ದೇವರ ಚಿತ್ರಕ್ಕೆ ಒಂದು ಕಾಗದ ಸಿಕ್ಕಿಸಿತ್ತು. ತೆಗೆದು ಓದಿದ—"ನಾನು ಗೋವಿಂದುವನ್ನು ಕಟ್ಟಿಕೊಂಡು ಹೋಗಿದ್ದೇನೆ. ನನ್ನ ನಿರೀಕ್ಷಣೆ ಬೇಡ. ಸಾಸುವೆಯಲ್ಲಿ ತಾಮ್ರದ ನಾಣ್ಯವಿದೆ. ಕಡಲೆಪುರಿ ಕೊಂಡು ತಿನ್ನಿ ಹೋಗಿ.—ಇಂತಿ ನಿಮ್ಮ ಮಡದಿ" ಎಂದಿತ್ತು.

ನೀತಿ:—ಯತಿಯೂ ಸಹ ಸತಿಯನ್ನಗಲಬಾರದು.

[ಜೇಮ್ಸ್ ಥರ್ಭರ್‌ರವರ ಒಂದು ಸಣ್ಣ ಕಥೆಯ ಆಧಾರ]

—"ಶೇಫ"

ಅಧಿಕಾರಿಗಳಿಗೂ ಪ್ರಚಾರ

ಸ್ವಾತಂತ್ರ್ಯದ ಅನಂತರ, ದೇಶದಲ್ಲೆಲ್ಲ ಮಂತ್ರಿಗಳ ಬಗ್ಗೆ ಪ್ರಚಾರ ಹೆಚ್ಚಿ, ಸಿವಿಲ್ ಸರ್ವಿಸ್ ಮುಂತಾದ ಉನ್ನತಾಧಿಕಾರಗಳನ್ನು ನಿರ್ವಹಿಸುತ್ತಿರುವ ದಕ್ಷ ನೌಕರರ ಕೆಲಸಕಾರ್ಯಗಳ ಪರ ಪ್ರಚಾರವೇ ಹಿಂದೆಬಿದ್ದು, ಜನರ ಮನ ಅವರಕಡೆ ಒಲಿಯುವುದು ಕಡಮೆಯಾಗಿರುವುದರಿಂದ, ಉತ್ತರ ಭಾರತದ ಒಂದು ಸಂಘದವರು ಈ ಸಮಸ್ಯೆಯನ್ನು ಕುರಿತು ಪರ್ಯಾಲೋಚಿಸಿ, ಹಲವಾರು ಅಮೂಲ್ಯ ಸಲಹೆಗಳನ್ನು ಸೂಚಿಸಿದಾರೆ. ಅವುಗಳಲ್ಲಿ ಮುಖ್ಯವಾದುವು ಇವು:—

೧. ಅಸ್ತಿಭಾರ ಶಿಲೆಗಳನ್ನು ಮಂತ್ರಿ ಉಪಮಂತ್ರಿ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಇತ್ಯಾದಿ ಅತ್ಯುತ್ತಮ ದೇಶಾಭಿಮಾನಿಗಳ ಸುವರ್ಣ ಹಸ್ತದಿಂದ ನೆರವೇರಿಸಿದರೂ, ಕಟ್ಟಡಗಳ ಕಾಲಾವಧಿ ಕಳಚಿಸುವುದು, ಗಾರೆಹಾಕುವ ಪ್ರಥಮ ಕರಣಿ ಆಡಿಸುವುದು, ನೆಲಕ್ಕೆ ಪ್ರಥಮ ದಮ್ಮಸ್ ಒತ್ತುವುದು, ಇತ್ಯಾದಿ ಸಮಾರಂಭಗಳಿಗೆ ಡಿಪ್ಟಿಕಮಿಷನರ ರಜತ ಹಸ್ತವನ್ನು ಪಯೋಗಿಸಬಹುದು. ಸೇತುವೆಗಳಿಗೂ ಕಟ್ಟಡಗಳ ಬಾಗಿಲಿಗೂ ಅಡ್ಡವಾಗಿ ಕಟ್ಟಿರುವ ಟೇಪನ್ನು ಮಂತ್ರಿಗಳ ಅಮೃತ ಹಸ್ತದಿಂದ ಕತ್ತರಿಸುತ್ತಿರುವುದು ಸರಿ ಅಷ್ಟೆ. ಆದರೆ, ಸೇತುವೆ ಮೇಲೆ ಮೊತ್ತ ಮೊದಲನೆಯದಾಗಿ ಎತ್ತಿನಗಾಡಿಯನ್ನು ಡಿಪ್ಟಿಕಮಿಷನರಿಂದಲೋ ಕಡೆಯಪಕ್ಷ ಅಮಿಲ್ದಾರಿಂದಲೋ ನಡಿಸಿ ಉತ್ಸವನಡೆಯಿಸಬಹುದು.

೨. ಮಂತ್ರಿಗಳೂ ಉಪಮಂತ್ರಿಗಳೂ ವಿಮಾನ ನಿಲ್ದಾಣ ಇತ್ಯಾದಿಗೆ ಬಂದಾಗ ಹೋದಾಗ ಅವರನ್ನು ಬೀಳ್ಕೊಡಲು ಬಾಳ್ಕೊಡಲು ಭಾರಿ ಸಮಾರಂಭಗಳಾಗಿ, ಅವುಗಳ ವರದಿ ಪತ್ರಿಕೆಗಳಲ್ಲಿ ವಿಸ್ತಾರವಾಗಿ ಪ್ರಕಟವಾಗುತ್ತದಲ್ಲವೆ? ಆದರೆ, ಈಗ, ಆ ವರದಿಗಳಲ್ಲಿ, ಖಾಸಗಿ ಮಹನೀಯರನ್ನು ಮಾತ್ರ ಹೆಸರೆತ್ತಿ ಸೂಚಿಸಿ, "ಅಲ್ಲದೆ, ಜಿಲ್ಲೆಯ ಮುಖ್ಯ ಮುಖ್ಯ ಅಧಿಕಾರಿಗಳೂ ಹಾಜರಿದ್ದರು", ಎಂದು ಮಾತ್ರ ಪ್ರಕಟವಾಗುತ್ತಿವೆ. ಈ ಪದ್ಧತಿ ಹೋಗಬೇಕು. ಸಾಮಾನ್ಯವಾಗಿ ಇಂಥ ಸಮಾರಂಭಗಳಿಗೆಲ್ಲ ಬರುವ ಖಾಸಗೀ ಮಹನೀಯರೂ, ಡಿಪ್ಟಿಕಮಿಷನರಾದ ಶ್ರೀ....ರೂ,... ಇತ್ಯಾದಿ ವರದಿಗಳು ಬರಬೇಕು.

೩. ಸಿನಿಮ ತಾರೆಯರನ್ನು ಶೇಖರಿಸಿ, ಪಾರ್ಲಿಮೆಂಟ್ ಸದಸ್ಯರನ್ನು ಕೂಡಿಸಿ, ಕ್ರಿಕೆಟ್ ಆಟ ಆಡಿಸುವಂತೆಯೇ, ಸರ್ಕಾರದ ಉನ್ನತಾಧಿಕಾರಿಗಳನ್ನು ಸೇರಿಸಿ,

ಅವರಿಗೂ ಖಾಸಗಿ ಮಹನೀಯರಿಗೂ ನಡುವೆ ಇಸ್ಪೀಟ್ ಪಂದ್ಯ ಕುಸ್ತಿ ಪಂದ್ಯಗಳನ್ನು ಮಾಡಬಹುದು. ಫೈಲುಗಳನ್ನೆಸೆಯುವುದು, ರೆಡ್ ಟೇಪನ್ನು ಹರಿಯುವುದು, ಬೇಗ ಬೇಗ ರುಜು ಹಾಕುವುದು, ಬೂಟ್ಸು ಬಿಚ್ಚುವುದು ಹಾಕುವುದು, ದೇಶಾವರ ಬೀರುವುದು, ಇತ್ಯಾದಿಗಳಲ್ಲಿ ಪಂದ್ಯಗಳನ್ನೇರ್ಪಡಿಸಬಹುದು.

೪. ಮಂತ್ರಿಗಳಿಗೆ ಭಾಷಣ ಬರೆದುಕೊಡುತ್ತಿರುವ ಅಧಿಕಾರಿಗಳ ಹೆಸರನ್ನು, ಅವರು ಅದೇ ಭಾಷಣಗಳನ್ನೋದಿ ಮುಗಿಸಿ, ಚಪ್ಪಾಳೆ ಸದ್ದಡಗಿದಮೇಲೆ, ಬಹಿರಂಗವಾಗಿ ತಿಳಿಸಬೇಕು.

೫. ಮಂತ್ರಿಗಳನ್ನು ಕುರಿತ ಹಾಸ್ಯದ ಚಟಾಕಿಗಳನ್ನು ಪ್ರಕಟಿಸಿ ಜನಪ್ರಿಯವಾಗುತ್ತಿರುವ ಪ್ರತಿ ಪತ್ರಿಕಾ ಸಂಪಾದಕನೂ, ಅಗತ್ಯವಾಗಿ, ಅಧಿಕಾರಿ ವರ್ಗದವರ ಕುಚೇಷ್ಟೆಗಳನ್ನು ಹಾಸ್ಯವಾಗಿ ಟೀಕಿಸಲೇ ಬೇಕೆಂಬ ನಿರ್ಬಂಧವನ್ನು ಹಾಕತಕ್ಕದ್ದು.

—ಕಾಮತ್



ಸಂತೃಪ್ತ ಗಣಪ
ಅದಕ್ಕೇ ಇಷ್ಟು ವಿಳಂಬವಾಗಿ ಬಂದಿದ್ದಾನೆ.

ತುತ್ತೂರಿ

ಸುಪ್ರಸಿದ್ಧ ಕಾದಂಬರಿ ಕಾರರೊಬ್ಬರು ತಮ್ಮ ಬಗ್ಗೆ ಪ್ರಚಾರವನ್ನು ತಾವೇ ಮಾಡಿಕೊಳ್ಳಲು ನಿರ್ಧರಿಸಿದಾರಂತೆ. ಆದರೆ, ಅವರು ಅದಕ್ಕಾಗಿ ಒಂದು ಹೊಸ ನಿಧಾನವನ್ನು ಅನುಸರಿಸುತ್ತಿದಾರೆ, ಅದೇ ಸೋಜಿಗ. ಅವರು ಬರೆದಿರುವ ಒಂದು ಕಾದಂಬರಿಯ ಮೊದಲನೆಯ ಅಧ್ಯಾಯದ ಕೆಲಭಾಗವನ್ನು ನೋಡಿದರೆ ಅದನ್ನು ನಾವು ತಿಳಿದುಕೊಳ್ಳಬಹುದು.

ಅಧ್ಯಾಯ ೧.

ಸೋಮಪ್ಪ ನಿಧಾನವಾಗಿ ಕಿಟಕಿಯ ಹತ್ತಿರಕ್ಕೆ ನಡೆದು, ಅದರಾಚೆಯ ಬೀದಿಯನ್ನು ನೋಡುತ್ತ ನಿಂತ. ಬೀದಿಯಲ್ಲಿ ಜನ, ಇದೇ ಗ್ರಂಥಕರ್ತನ "ಒಂದು ಕೊಡ ನೀರು" ಎಂಬ ಕಾದಂಬರಿಯ ೧೧೦'ನೆಯ ಪುಟದಲ್ಲಿ ವಿವರಿಸಿರುವ ರೀತಿಯಲ್ಲಿ, ಬಿರುಬಿರನೆ ನಡೆದು ಬರುತ್ತಿದ್ದರು. ಅವರ ನಡುವೆ, ಒಂದು ನಾರೀಮಣಿ, ಇದೇ ಗ್ರಂಥಕರ್ತನ "ಡಬ್ಬಲ್ ಜಡೆ" ಎಂಬ ಕಾದಂಬರಿಯ ೭೮ನೆ ಪುಟದಲ್ಲಿ ಚಿತ್ರಿತವಾದ ಹುಡುಗಿಯಂತೆ, ಥಳಕುತ್ತ ಬಳುಕುತ್ತ, ಕೈಯಲ್ಲೊಂದು ಕೂಸು (ಇದೇ ಬರಹಗಾರನ "ರಾಗೀ ಹಿಟ್ಟು" ಎಂಬ ಪುಸ್ತಕದ ೩೨ ನೆಯ ಪುಟದಲ್ಲಿ ಹಜಾರದಿಂದ ಮುಗ್ಗರಿಸಿದ ಕೂಸಿನಷ್ಟೇ ಪ್ರಾಯ ಆಕಾರ) ಸಹಿತ, ಬರುತ್ತಿದ್ದಳು. ಅವಳನ್ನು ನೋಡುತ್ತಲೂ (ಇದೇ ಗ್ರಂಥಕರ್ತನ "ಸತ್ಯಭಾಮಾ" ಎಂಬ ಕಾದಂಬರಿಯ ೩೪೦ನೆ ಪುಟದಿಂದ ೩೪೩ನೆ ಪುಟದವರೆಗೂ ಓದಿಕೊಳ್ಳಿ.) ಅವಳೂ ಕೂಡ, (ಇದೇ ಸುಪ್ರಸಿದ್ಧನ "ವಿಟ ಚಕ್ರವರ್ತಿ" ಎಂಬ ಕಾದಂಬರಿಯ ೩೯ ನೆಯ ಪುಟದ ೨೦ ನೆಯ ಪಂಕ್ತಿಯಿಂದ ೧೮ ನೆಯ ಪಂಕ್ತಿಯವರೆಗೆ ಓದಿಕೊಳ್ಳಿ, ಅದನ್ನೇ ಇಲ್ಲಿ ಸೇರಿಸಿಕೊಳ್ಳಿ) ಆದರೆ, ಪರಿಸ್ಥಿತಿ (ಇದೇ ಗ್ರಂಥಕರ್ತನ "ಶುಂಭನಿ ಶುಂಭ" ಕಾದಂಬರಿಯ ೪ ನೆಯ ಅಧ್ಯಾಯದಂತೆ) ಬಿಗಡಾಯಿಸಿತು ಇತ್ಯಾದಿ.

—ರೇವಣ್ಣ

ನನ್ನ ಮುಖ

ನಿಮ್ಮ ಅನುಭವ ಹೇಗೋ, ನನಗೆ ತಿಳಿಯದು. ಆದರೆ, ನನಗಂತೂ, ಆಗಾಗ, ಒಂದು ತರಹ ನಿರಾಶೆಯ ಮಬ್ಬು ಕವಿದು, ದಾರಿಯೇ ಕಾಣವಾಗುವುದು. ನಾನು ತೀರ ಅಪ್ರಯೋಜಕ, ಭೂಮಿಗೆ ಭಾರ, ಸ್ವರ್ಗಕ್ಕೆ ದೂರ, ಮನೆಗೆ ಮಾರಿ, ಎಂದೆಲ್ಲ ಅನ್ನಿಸುವುದು.

ಅಪ್ಪನ ಆಸ್ತಿಯ ಮದದಲ್ಲಿ ಕತ್ತಿಗೆ ಚಿನ್ನದಸರ ಸುತ್ತಿಕೊಂಡು, ಗುಂಡಿ ಬಿಚ್ಚಿದ ಷರ್ಟಿನ ಸಹಿತ ಗ್ರೇಫ್ಲಾನಲ್ ಸೂಟುಧಾರಿಗಳು ಮೋಟಾರ್ ಸೈಕಲ್ ಸವಾರನ ಸೊಂಟ ಹಿಡಿದುಕೊಂಡು ಭರ್ರನೆ ಬಿರುಗಾಳಿಯಂತೆ ರಸ್ತೆ ಎಡಮಗ್ಗುಲಲ್ಲಿ ಹೋಗುವುದನ್ನು ನೋಡಿದರೆ ಹೊಟ್ಟೆಯಲ್ಲೇನೋ ಸಂಕಟವಾಗುತ್ತದೆ. ಇ. ಪಿ. ಎಸ್. ಕೂಡ ಗಳಿಸದ ಬೃಹಸ್ಪತಿಗಳ ಬಾಗಿಲ ಮುಂದೆ, ಎಂ.ಎ., ಎಂ ಎಸ್‌ಸಿ ಗಳು ಹಾರ ತುರಾಯಿ ನಿಂಬೆಹಣ್ಣಿನ ಸಂಗಡ ಹಲ್ಲು ಕಿರಿಯುವುದನ್ನು ಕಂಡಾಗ, ಬದುಕೇ ಬೇಸರವಾಗುತ್ತದೆ. ಯಾಕೆ ಈ ಸ್ಕೂಲು ಈ ಕಾಲೇಜು ಎನಿಸುತ್ತದೆ.

ಮೊನ್ನೆ, ರೈಲ್ವೆಸ್ಟೇಷನ್‌ನಲ್ಲಿ, ಒಂದು ಸಂಭವ ನಡೆಯಿತು. ಆಗ, ನನಗೆ ರೈಲ್ ಕಂಬಿಮೇಲೆ ಮಲಗಿಬಿಡೋಣ ಎನ್ನುವಷ್ಟು ಜಿಗುಪ್ಸೆ ಬಂತು.

ಇನ್ನೇನೂ ಇಲ್ಲ. ನುಗ್ಗುತ್ತಾ ಇದ್ದೆವು, ಪ್ಲಾಟ್‌ಫಾರಂ ಒಳಕ್ಕೆ, ಅವಸರ ಅವಸರವಾಗಿ ನನ್ನ ಹಿಂದಿನಿಂದ ಒಬ್ಬ ಧಾಂಡಿಗ, ನನ್ನೊತ್ತರಿಸಿದ. ಮುಂದಕ್ಕೆ ಧಾವಿಸಿ, ಟಿಕೀಟ್ ಕಲೆಕ್ಟರನ್ನೂ ಲೆಕ್ಕಿಸದೆ ಬಾಗಿಲು ದಾಟಿ, ಆಚೆ ಹೋಗೇಬಿಟ್ಟ. ಟಿ ಸಿ ಎಂದು ರೈಲ್ವೆ ಇಲಾಖೆಯಲ್ಲೆಲ್ಲ ಪ್ರಖ್ಯಾತನಾದ ಆ ಭೂಪತಿ ಅವನನ್ನು ತಡೆಯಲೇ ಇಲ್ಲ. ನಾನೂ ಅದೇ ಠೀವಿಯಿಂದ ಅವನನ್ನು ಹಾದುಹೋದೆ. ಆದರೆ, ನನ್ನನ್ನು ಹಿಡಿದೆಳೆದು, "ರೀ! ಟೀಕೀಟ್ ಎಲ್ಲಿ?" ಎಂದು ಅಡ್ಡಮಾತು ಆಡಿ ನಿಲ್ಲಿಸಿದ. ಒಳಜೋಬಿಂದ ಅದನ್ನು ಹೊರಗೆಳೆದು ತೋರಿಸಿದಮೇಲೂ, ಅದನ್ನ ನಾಲ್ಕೈದುಸಾರಿ ಮಗುಚಿ ಓದಿದನಂತರವೇ ಅವನಿಗೆ ಸಮಾಧಾನ. ಇದು ಯಾವ ನ್ಯಾಯ? ನನ್ನ ಮುಖದಲ್ಲಿ ಕಳ್ಳನ ಕಳೆ ಇದೆಯೆ? ಆತ ದೇವಲೋಕದಿಂದ ಇಳಿದು ಬಂದಿದಾನೆಯೆ?

ಮೊನ್ನೆ ಬಸ್‌ನಲ್ಲೂ ಹೀಗೆಯೇ. ಪಕ್ಕದಲ್ಲಿ ಕೂತಿದ್ದ ಧಾಂಡಿಗ "ಪಾಸ್" ಎಂದು ಹೇಳುತ್ತಲೂ, ಕಂಡಕ್ಟರ್ ಅವನಿಗೆ ಒಂದು ಸಲಾಮು ತೆತ್ತು ಅವನೆದುರು

ಹಲ್ಲು ಕಿರಿದ. ನಾನೂ, ಅಷ್ಟೇ ಜಬರ್ದಸ್ತಿನಿಂದ, ಅದೇ ಶ್ರುತಿಯಲ್ಲೇ "ಪಾಸ್" ಎಂದೆ. ಆದರೆ, ಅವನು, ಯಥಾಪ್ರಕಾರ, ನನ್ನ ಮಾತನ್ನು ನಂಬಲಿಲ್ಲ. "ಎಲ್ಲಿ ತೋರಿಸು" ಎಂದು ನನ್ನೆದುರು ನಿಂತೇಬಿಟ್ಟ. ತೋರಿಸಿರಿ, ಎಂದು ಹೇಳುವುದಕ್ಕೂ ಆತನಿಗೆ ನಾಲಗೆ ಏಳಲಿಲ್ಲ. ಇದೆಂತಹ ಹಣೆಯಬರಹ ನನ್ನದು?

ಆಮೇಲೆ, ಮೊನ್ನೆ ಬೆಂಗಳೂರಲ್ಲಿ ರಾಷ್ಟ್ರಪತಿಯ ಮೆರವಣಿಗೆ ಜರುಗಿತಲ್ಲಾ.... ಭಾರತ್ ಟಾಕೀಸ್ ಹತ್ತಿರದ ಫುಟ್‌ಪಾತಿನಲ್ಲಿ ನಾನು ನಿಂತಿದ್ದೆ. ನನ್ನ ಬಲಗಡೆ ಒಬ್ಬ; ಅವನೂ ನನ್ನ ಹಾಗೆ ಸೂಟ್‌ಧಾರಿ. ಆದರೂ, ಅವನ ಸೂಟಿಗೆ ಕೊಂಚ ಹರಾಜಿನ ವಾಸನೆ. ಎಡಗೈಗೊಂದು ರಿಸ್ಟ್‌ವಾಚ್ ಕಟ್ಟಿಕೊಂಡಿದ್ದ. ಅದೂ ಒಡಕಲು. ನಿಂತೇ ಹೋಗಿತ್ತು. ಗಂಟೆ ಎಷ್ಟು ಎಂದು ಆತ ನನ್ನನ್ನೇ ಗಳಿಗೆ ಗಳಿಗೆಗೂ ಕೇಳು ವನು ...ಆದರೂ, ರಾಷ್ಟ್ರಪತಿ ಅವನಕಡೆ ಕೈಮುಗಿದರೇ ಹೊರತು, ನನ್ನೆದುರು ನೇರ ವಾಗಿ ನನ್ನ ಕೈಮುಗಿತಕ್ಕೆ ಪ್ರತಿಯಾಗಿ ಕೈಮುಗಿಯಲಿಲ್ಲ .... ನನ್ನ ನಮಸ್ಕಾರ ಅವರಿಗೆ ಕಾಣಿಸಲೇ ಇಲ್ಲ. ದುರಾದೃಷ್ಟ ಎನ್ನುತ್ತೀರೇನು? ಅಲ್ಲ...ನನ್ನ ಜಾಯ ಮಾನವೇ ಅದು. ನನ್ನ ಮುಖದಲ್ಲಿ ತೇಲುತ್ತಿರುವ ದರಿದ್ರಕಳೆಯ ಫಲವೇ ಅದು.

—ಪಾಟಾಳಿ.

ಹಾದಿಯಲ್ಲಿ ಕೇಳಿಸಿದುದು

"ಹೇಳ್ತೀನಿ ಕೇಳು. ಮಂತ್ರಿಗಳು ನಮ್ಮ ಪುರಾಣಾನೆಲ್ಲಾ ಕೇಳಿ ಹೇಳಿದರು —"ನೋಡೀಪ್ಪಾ-ನೀವೆಲ್ಲಾ N.G.O., N.G.O., ಅಂತ ಹೆಸರಿನಮೇಲೆ, ನನ್ನ ಮೇಲೆ ಮೇಲೆ ಪೀಡಿಸಬೇಡಿ. ನಿಮಗೆ ಶಾಶ್ವತವಾದ ಒಂದು ಸುಧಾರಣೆ ಮಾಡ್ತೇನೆ - ಇನ್ನುಮೇಲೆ ನಿಮ್ಮ ಹೆಸರನ್ನೂ ಗೆಜೆಟ್‌ನಲ್ಲಿ ಹಾಕಿಸಿಕೊಡ್ತೀನಿ. ಆಗಲಾದರೂ ನಿಮ್ಮ ಕಾಟ ತಪ್ಪೀತೋ?" ಅಂತ.

ಏನು ಫಲ?

'ಪೀಸು' ಪೀಸೆಂದರೆ ಏನು ಫಲ
ಬಾಯೊಳು 'ಪೀಸ್' ಇರೆ ಏನು ಫಲ ||ಪ||

ಕುಟಿಲವ ಬಿಡದಲೆ ಪೀಸಿನ ಮಂತ್ರವ
ಪಠನೆಯ ಮಾಡಿದರೇನು ಫಲ
ಸಮರವ ಬಯಸುವ ಮನುಜರು ಸಂತತ
ಪೀಸನು ನಟಿಸಿದರೇನು ಫಲ

ಬಾಂಬುಗಳೆಲ್ಲವ ಮಾಡಿಸಿ ಪೇರಿಸಿ
ಶಾಂತಿಗದೆಂದರೆ ಏನುಫಲ
ಕಾದುವ ಜನಕೆಲ್ಲ ಶಸ್ತ್ರವ ಒದಗಿಸಿ
ರಕ್ಷಣೆಗೆಂದರೆ ಏನು ಫಲ

ಚೀಣರ ಕಂಡರೆ ಹಲ್ಲನು ಮಸೆಯುತ
ಚ್ಯಾಂಗನ ಹೊತ್ತರದೇನು ಫಲ
ಪಾಕರ ಕೈಯಲಿ ಬೆಂಕಿಯ ನೀಡುತ
ಇಂಡ್ಯದ ಬೆನ್ ಕೆರೆದೇನು ಫಲ

ಸಕಲರು ಬಾಳಲಿ ಎಂದೆಂದನ್ನದೆ
ಲಿಂಕನ ಹೆಸರೆತ್ತಿದರೇನು ಫಲ
'ಸೈ' ಎಂದ ಜನರನ್ನೆ ಸಂಪನ್ನರೆನ್ನುತ್ತ
ಅನ್ಯರ ಪೀಡಿಸಲೇನು ಫಲ

ಗ್ವಾಟೆಮಾಲಾ ದೊಳಗೆ ತುಂಟರ ನಟ್ಟುವ
ಶಾಂತಿಯ ವ್ರತದಿಂದ ಏನು ಫಲ
ವಾರಿನ ಕೃಪೆಯದು ಹಿಂಗದೆ ಪೀಸಿನ
ರಾಗವನೆಳೆದರೆ ಏನು ಫಲ

—ರಾಮಕೃಷ್ಣ.

"ಸೊಗಸುಗಾರ ದೊಡ್ಡಶಾಮಿ"

ಗರಿಗರಿಯಾದ ಸೂಟು, ನೆರಿನೆರಿಯಾಗಿ ಕಟ್ಟಿದ ಚೋಟ್ಯೆ, ತಿದ್ದಿ ತೀಡಿದ ಕ್ರಾಪು, ಟಕ್ ಟಕ್ ಎಂದು ಕಾಲಸಪ್ಪಳಮಾಡುತ್ತಾ ಸೊಗಸುಗಾರ ದೊಡ್ಡಶಾಮಿ ಕ್ಲಬ್ಬಿಗೆ ಬಂದ. ಬಂದವನು ನಮ್ಮ ಮೇಜಿನ ಹತ್ತಿರಕ್ಕೇ ಬಂದ. ನನ್ನ ಹಿಂದೆಯೇ ನಿಂತ.

ದೊಡ್ಡಶಾಮಿ ನಮ್ಮ ಕ್ಲಬ್ಬಿಗೆ ಹೊರನಾಡ ಸದಸ್ಯ. ಕಾರ್ಪೊರೇಷನ್ ಗಡಿಯಾಚೆ ಇರುವನಾದ್ದರಿಂದ ಅಲ್ಪ ರುಸುಮಿನಲ್ಲೇ ಸದಸ್ಯ. ತಾನಿರುವ ಹಳ್ಳಿಯಲ್ಲಿ, ಅವನೇ ರಾಜ, ಮಂತ್ರಿ, ಕೋಲುಗಾರ. ಪ್ರಪಂಚದ ಯಾವ ಪ್ರಧಾನ ಮಂತ್ರಿಯೂ ಅನುಭವಿಸಲಾರದ ಸರ್ವಾಧಿಕಾರತ್ವವನ್ನೂ ಅವ ತನ್ನ ಗ್ರಾಮದಲ್ಲಿ ಚಲಾಯಿಸುತ್ತಿದ್ದ-ಕಾಲಾನುಕಾಲದಿಂದ—.

ಆದರೆ ಕೆಲವು ವರ್ಷಗಳಿಂದೀಚೆಗೆ, ಅದೇ ಗ್ರಾಮದಲ್ಲಿ ಹುಟ್ಟಿ, ಇವನ ಹತ್ತಿರವೇ ಶಾಲಾಫೀಜನ್ನೂ ಧರ್ಮಾರ್ಥವಾಗಿ ಪಡೆದ ಹರೆಯ ಹುಡುಗನೊಬ್ಬ ಕಾಲೇಜಿಗೆ ಓದುಗಾಗಿ ಷಹರಿಗೆ ಬಂದಿದ್ದ. ಷಹರಿನ ಆಟ ನೋಟಗಳು ಅವನನ್ನು ಸೆಳೆದಿರಲಿಲ್ಲ. ಆದರೆ ದೇಶನಾಯಕರ ಸ್ಫೂರ್ತಿಭಾಷಣಗಳು ಅವನನ್ನು ಮೋಹಗೊಳಿಸಿದ್ದುವು. ಕಾಲೇಜಿನಲ್ಲಿ ಮೊದಲ ಪಂಙ್ತಿಯಲ್ಲಿ ಪದವೀಧರನಾದಮೇಲೆ, ತನ್ನ ಗ್ರಾಮಕ್ಕೆ ಹೋಗಿ ಗ್ರಾಮೋದ್ಧಾರಮಾಡಲು ಟೊಂಕಕಟ್ಟಿ ನಿಂತಿದ್ದ ಸಾಂಬಯ್ಯ. ಆಶಾವಾದಿ ಗಗನ ಕುಸುಮಕ್ಕೇ ಕೈಚಾಚಿದ್ದ.

ದೊಡ್ಡಶಾಮಿಯ ಗ್ರಾಮದಲ್ಲಿ ಚುನಾವಣೆ. ಬಡಕಲ ಸಾಂಬಯ್ಯ ಪ್ರತಿಸ್ಪರ್ಧಿ. ಆದರೂ ಗ್ರಾಮದ ಮನೆ ಮನೆಯವರಿಗೂ ಸಾಂಬಯ್ಯ ಚಿರಪರಿಚಿತ. ದೊಡ್ಡವರು ಎಂದರೆ ನಮಸ್ಕರಿಸುವವನು. ತನ್ನ ವಯಸ್ಸಿನವರು ಎಂದರೆ ತೋಳಮೇಲೆ ಕೈಹಾಕುವ. ಊರ ಮಕ್ಕಳನ್ನೆಲ್ಲಾ ಎತ್ತಿಕೊಂಡು ಮುದ್ದಾಡಿ ಕತೆ ಹೇಳಿ ಒಲಿಸಿಕೊಳ್ಳುವ. ಗ್ರಾಮದ ಹೆಂಗೆಳೆಯರೆಲ್ಲರೂ ಸಾಂಬಯ್ಯನನ್ನು ಸೋದರನಂತೆಯೇ ಆದರಿಸುತ್ತಿದ್ದರು.

ದೊಡ್ಡಶಾಮಿಯ ಏಜಂಟರು ಹೇಳಿದರು—"ಯಜಮಾನರೇ! ನೀವು ಗ್ರಾಮದ ಹಳ್ಳಿ ಹಳ್ಳಿಗೂ ಹೋಗಿ ಪ್ರತಿ ಒಬ್ಬರನ್ನೂ ಮಾತಾಡಿಸಿ ಅವರ ಆದರವನ್ನು ಸಂಪಾದಿಸಬೇಕು. ಈಗ ವಯಸ್ಕರ ಮತ ಪದ್ಧತಿ. ಅಂದಮೇಲೆ ಹಳ್ಳಿಯ ಹೆಂಗಸರ

ಮತವನ್ನು ಪಡೆಯಲೇಬೇಕು. ನಿಮ್ಮ ಸೂಟು ಬೂಟು, ಅಲಂಕಾರ ಡೌಲು ಇದಕ್ಕೆ ಸಹಾಯವಾಗಬಹುದಾದರೂ, ಹೆಂಗಸರ ಮತ ಸೆಳೆಯಲು ಅವರ ಮಕ್ಕಳ ಮುದ್ದಾಡುವಿಕೆಯೇ ಗಾಂಢೀವ. ನಿಮ್ಮ ಬಟ್ಟೆ ಹೊಲಸಾದರೂ ಆಗಲಿ ಊರ ಮಕ್ಕಳನ್ನು ಎತ್ತಿ ಮುದ್ದಾಡಿ. ಅದು ಮಾಡಿದ್ದೀರೆಂದು ಸರ್ವರಿಗೂ ತಿಳಿಯಲು ಅದನ್ನು ಫೋಟೋ ಹಿಡಿಸಿ ಪ್ರಚುರಮಾಡಿ. ಈ ಪ್ರಚಾರಕಾರ್ಯಕ್ಕೆ ನಿಮ್ಮ ಸೇವಕರು ನಾವು ಇದ್ದೇ ಇದೇವೆ" ಎಂದು.

ಅಂದಿನಿಂದ ದೊಡ್ಡಶಾಮಿ ಫೋಟೋಗ್ರಾಫರಿನ ಜತೆಯಲ್ಲಿ ಹಳ್ಳಿ ಹಳ್ಳಿಗೂ ಹೋಗಿ ಅಲ್ಲಿ ದೊರೆತ ಅವಲಕ್ಷಣವಾದ, ಅಸಾಧ್ಯ ಕೊಳೆಯಾದ ಮಗುವನ್ನು ಚುನಾಯಿಸಿ, ಅದನ್ನು ಬರ್‌ಬರಿ ಸೂಟಿನ, ಎಡತೋಳಿನ ಮೇಲೇರಿಸಿಕೊಂಡು ಫೋಟೋ ಹಿಡಿಸಿಕೊಂಡು, ತದನಂತರ ಆ ಮಗುವನ್ನು ಚರಂಡಿಯ ಪಕ್ಕಕ್ಕೆ ನೂಕಿ, ತಾನೂ ತೋಳು ಕೊಡವಿಕೊಂಡು, ಮುಂದೆ ಸಾಗುತ್ತಿದ್ದ. ಆ ಮಗುವಿನ ತಂದೆಗೆ, ಮಗುವಿನ ಭವಿಷ್ಯದ ಯೋಚನೆ ಮತ್ತು ಖರ್ಚು ತನ್ನದೆಂದು ಭರವಸೆ ಕೊಡುತ್ತಿದ್ದ.

ಬಡಕಲ ಸಾಂಬಯ್ಯ ಮಕ್ಕಳಿಗೆ ಕತೆ ಹೇಳಿ ತಾಯಂದಿರು ಕೊಟ್ಟ ಬೆಲ್ಲದ ಪಾನಕ ಕುಡಿದು ಮುಂದಕ್ಕೆ ಸಾಗುತ್ತಿದ್ದ.

* * *

ಚುನಾವಣೆಯೆಲ್ಲಾ ಮುಗಿಯಿತು. ದೊಡ್ಡಶಾಮಿ ವಿಶ್ರಮಿಸಿಕೊಳ್ಳಲು ಷಹರಿಗೆ ಬಂದಿದ್ದ, ಫಲಿತಾಂಶ ಬರುವ ಮುನ್ನ. ಬರುವಾಗ ತಂದಿದ್ದ ಆ ದುರ್ದೈವೀಭಾಗ್ಯದ ಮಕ್ಕಳನ್ನು ಇವ ಲಾಲಿಸುತ್ತಿದ್ದ ಚಿತ್ರವನ್ನು. ಅದನ್ನೇ ನಮ್ಮೆದುರಿಗೆ ಹಿಡಿದು, ಈ ಆಟ ಹೂಡಿ ಆ ತಲೆಹೋಕ ಸಾಂಬಯ್ಯನ ಬೆನ್ನು ಮುರಿಯುತ್ತೇನೆ ಎಂದು ಜಂಭಕೊಚ್ಚಿಕೊಳ್ಳುತ್ತಿದ್ದ.

* * *

ಆ ಸಂಜೆ, ಧೂಮಕೇತುವು ಸಂಧ್ಯಾಕಾಲದಲ್ಲೇ ಗಗನದಲ್ಲಿ ಕಾಣಿಸಿಕೊಂಡ ಸಂಜೆ, ದೊಡ್ಡಶಾಮಿ, ನನ್ನ ಕುರ್ಚಿಯ ಹಿಂದೆ ನಿಂತು ಇಂತಹ ಫೋಟೋ ಒಂದನ್ನು ನಮ್ಮೆದುರಿಗೆ ಹಿಡಿದು, ತಾನು ನಡೆಸಿದ ಅಮೋಘ ಚುನಾವಣಾ ಪ್ರಚಾರವನ್ನು ನಮ್ಮಗಳ ಕಿವಿಗಳು ಚಿಟ್ಟು ಹಿಡಿಯುವತನಕ, ಹೇಳಿದ.

* * *

ಆಗ ಭೂಕಂಪವಾದಹಾಗಾಯ್ತು. ಲೋಕವನ್ನೇ ಹೊತ್ತ ಆದಿಶೇಷನು ಬುಸುಗುಟ್ಟಿದಂತಾಯ್ತು, ಸರಸರ ಶಬ್ದವಾಯ್ತು. ತಲೆಯೆತ್ತಿ ನೋಡುತ್ತೇನೆ, ಕೊರವ ಬಂದಿಳಿದಿದ್ದಾನೆ! ನನ್ನ ಎಡತೋಳಿನ ಮೇಲೆ ಬಲಗೈ ತಾಕಿಸಿ ನಿಂತಿದ್ದಾನೆ. ನನ್ನ ಬಲತೋಳಿನಮೇಲೆ ದೊಡ್ಡಶಾಮಿಯ ಎಡಗೈ ಎಂದೂ ಹೇಳಬೇಕೇ?

ದೊಡ್ಡಶಾಮಿಯು ಮಗುವನ್ನೆತ್ತಿಕೊಂಡಿದ್ದ ಫೋಟೋ ನನ್ನ ಕೈಲಿ. ಅದನ್ನು ಕೊರವ ಕಿತ್ತುಕೊಂಡ. ದೊಡ್ಡಶಾಮಿಯನ್ನು ನೋಡಿದ. "ಎಷ್ಟು ಚೆನ್ನಾಗಿದೆಯಯ್ಯಾ ನಿನ್ನ ಫೋಟೋ! ನಿನ್ನ ಹಾಗೇ ಇದೆಯಲ್ಲಯ್ಯಾ! ಯಾರಯ್ಯಾ ತೆಗೆದಿದ್ದು, ಅಂದಹಾಗೆ ನಿನ್ನ ಈ ಮಗುವಿಗೆ ಹೆಸರೇನು ಇಟ್ಟಿದ್ದೀ! ಇಷ್ಟು ಅಂದವಾದ ಮಗುವನ್ನು ಚಿಕ್ಕಶಾಮಣ್ಣ, ಎಂದೇ ಕರೆಯಬೇಕು" ಎಂದು ಪಟಪಟನೆ ಒದರಿದ.

ನಾನು ಬಲಗಡೆಗೆ ತಲೆಯೆತ್ತಿದೆ. ದೊಡ್ಡಶಾಮಿ ಮಾಯವಾಗಿದ್ದ. ಎಡಗಡೆಗೆ ತಲೆ ಕೊಂಕಿದೆ. ಕೊರವ ನಸುನಕ್ಕ. ನನ್ನ ಬಲ ಹುಬ್ಬನ್ನು ಪ್ರಶ್ನಾರ್ಥಕ ಚಿಹ್ನೆಯಂತೆ ಎತ್ತಿದೆ. ಅವ ನಕ್ಕು ಒಂದು ಕುರ್ಚಿಯನ್ನೆಳೆದುಕೊಂಡು ನಮ್ಮ ಸುತ್ತು ಪಂಜ್ತ್ತ್ನಯಲ್ಲೇ ಕೂತ. ಗಂಟಲನ್ನು ಕುದುರೆ ಕೆನೆದು ಸರಿಪಡಿಸಿಕೊಳ್ಳುವಂತೆ ಸರಿಪಡಿಸಿಕೊಂಡು ಹೇಳಿದ.

"ದೊಡ್ಡಶಾಮಿಯ ಐಶ್ವರ್ಯಾನುಕೂಲವಿಲ್ಲದೆ ಈ ಚುನಾವಣಾ ಪ್ರಚಾರದಲ್ಲಿ ಸಾಬಂಯ್ಯನಿಗೆ ಕಷ್ಟವೇನೋ ಆಯಿತು. ಆದರೆ ದೇವರು ಕೊಟ್ಟ ಬುದ್ಧಿ ಉಪಯೋಗಿಸಿಕೊಂಡು, ದೊಡ್ಡಶಾಮಿ ಫೋಟೋಮೂಲಕ ಪ್ರಚಾರಮಾಡಿದ ಹಳ್ಳಿಗಳಿಗೆ ತದನಂತರ ಹೋದ ಸಾಂಬಯ್ಯ ತಂದೆ ಮಗುವನ್ನೆತ್ತಿಕೊಂಡಿರುವ ಈ ಫೋಟೋಗಳು ಎಷ್ಟು ಚೆನ್ನು ಎಂದು ಹೊಗಳಲಾರಂಭಿಸಿದ. ಎದುರಾಳಿಯನ್ನು ತೆಗಳಲಿಲ್ಲ. ಈ ರೀತಿ ಹೊಗಳಿದ. ಹಳ್ಳಿ ಹಳ್ಳಿಯಲ್ಲೂ ಹೊಗಳಿದ. ಈ ಮಧ್ಯಾಹ್ನ ನನ್ನ ಹತ್ತಿರ ಒಂದು ಪುಸ್ತಕ ಎರವಲು ಪಡೆಯಲು ಬಂದಾಗ ಸಾಂಬಯ್ಯ ಈ ವಿಚಾರ ಹೇಳಿದ. ಅದನ್ನೇ ಉಪಯೋಗಿಸಿಕೊಂಡೆ ಈಗ"

ಎಂದು ವಿಶದೀಕರಿಸಿದ.

ನಾವೆಲ್ಲಾ ನಕ್ಕೆವು.

ಅಷ್ಟುಹೊತ್ತಿಗೆ ಸಂಧ್ಯಾ ಪತ್ರಿಕೆ ಬಂದಿತ್ತು. ಚುನಾವಣಾ ಫಲಿತಾಂಶಗಳು ಹೊರಬಿದ್ದಿದ್ದುವು.

ಸಾಂಬಯ್ಯ ಗೆದ್ದಿದ್ದ. ಸೊಗಸುಗಾರ ದೊಡ್ಡಶಾಮಿ ಪರಾಜಿತನಾಗಿದ್ದ. ಆದರೂ ಪತ್ರಿಕೆಯಲ್ಲಿದ್ದ ಇಬ್ಬರ ಫೋಟೋಗಳಲ್ಲಿ ಸಾಂಬಯ್ಯನಿಗೆ ಮೀಸೆ ಇದ್ದಿರಲಿಲ್ಲ. ಸೊಗಸುಗಾರ ದೊಡ್ಡಶಾಮಿಯ ಮೀಸೆ ಮಣ್ಣಾಗಿರಲಿಲ್ಲ!!

* * *

—ಕುಮಾರ್.

ನನ್ನ ಮಾತು ಅಂದರೆ...

"ನೀವು ಮಾತಾಡಿದ್ದು ನಮಗೆ ಕೇಳಿಸಿತು, ನಿನ್ನೆ ರಾತ್ರಿ", ಎಂದರು, ನನ್ನ ಪಕ್ಕದಮನೆ ಗೋವಿಂದರಾಯರು. "ಎಲಾ! ಧೂರ್ತ! ಕಿವಿಯನ್ನು ನಮ್ಮ ಮನೆಯಕಡೆ ತಿರುಗಿಸಿ, ನಾವು, ಗಂಡ ಹೆಂಡತಿ ಏನು ಹೇಳುತ್ತಿದೇವೆ ಅಂತ....", ಎಂದು ಒಳಗೊಳಗೆ ಕುದಿದೆ. ಅಷ್ಟರಲ್ಲಿ ಅವರು, "ನನ್ನ ಹೆಂಡತಿಗೆ ಹೇಳಿದೆ ನಾನು,....ಬಾರೆ! ಪಕ್ಕದಮನೆಯವರು ಮಾತಾಡುತ್ತಿದಾರೆ, ಬೇಗಬಾ ...ಅಂತ ಅವಳನ್ನೂ ಕರೆದೆ ...ಇಬ್ಬರೂ ಕೇಳಿದೆವು", ಅಂದರು, ಅವರು. ಅವರ ಮುಖ ಆನಂದದಿಂದ ಅರಳಿತ್ತು. ಯಾರೂ ಕೇಳಬಾರದು, ಯಾರಿಗೂ ಕೇಳಿಸಬಾರದು, ಎಂದು ನಾನು ಏನನ್ನೋ ಮಾತನಾಡುತ್ತಿದ್ದಹಾಗೂ, ಅದನ್ನೆಲ್ಲ ಅವರಿಬ್ಬರೂ ಉಪಾಯದಿಂದ ಪತ್ತೆ ಹಚ್ಚಿದ ಹಾಗೂ, ಅವರು ಹಿಗ್ಗಿದರು. ತಮ್ಮ ಜಾಣತನಕ್ಕಾಗಿ ತಾವೇ ತಮ್ಮ ಬೆನ್ನನ್ನು ತಟ್ಟಿಕೊಂಡರು.

ಹತ್ತು ಹೆಜ್ಜೆ ಮುಂದೆ ನಡೆದೆ, ಮಹಿಳಾಸಮಾಜದ ಕಾರ್ಯದರ್ಶಿ ಶ್ರೀಮತಿ ಅನುಸೂಯಾಬಾಯಿ ಅವರು ಎದುರಿಗೆ ಸಿಕ್ಕರು. "ನಿನ್ನೆ ರಾತ್ರಿ ನೀವು ಮಾತಾಡಿದ್ದು ನಾನು ಕೇಳಿದೆ ..." ಎಂದರು, ಅವರೂ. ಪರವಾಇಲ್ಲ. ನನ್ನ ಮಾತು ಅಂದರೆ, ಎಷ್ಟು ಜನ ಅದನ್ನು ಕೇಳಲು ಸೇರುತ್ತಾರೆ, ಕಿವಿಯಾಡಿಸುತ್ತಾರೆ, ಎಂದು ನಾನೂ ಹಿಗ್ಗಿದೆ, ಆದರೂ, ಆಕೆ ಏಕೆ ನನ್ನಮಾತು ಕೇಳುವುದಕ್ಕಾಗಿ ರಾತ್ರಿ ಹೊತ್ತು .. ?, ಎಂಬ ಅನುಮಾನ ಸಂಪೂರ್ಣ ಪರಿಹಾರವಾಗಲಿಲ್ಲ.


ಮೂಲೆ ಅಂಗಡಿ ಶೆಟ್ಟರು ನನ್ನನ್ನು ನೋಡುತ್ತಲೂ, ಎದ್ದು ರಸ್ತೆ ಮಧ್ಯಕ್ಕೆ ಬಂದರು. "ನಿಮ್ಮ ಧ್ವನಿಯ ಹಾಗೆಯೇ ಇತ್ತು, ನಿನ್ನೆ ರಾತ್ರಿ, ಒಂದೇ ಸಮನೆ ಯದ್ವಾ ತದ್ವಾ ಕೂಗುತ್ತಿದ್ದರು. ಯಾರೋ, ನಿಮ್ಮ ಮನೆಯೊಳಗೆ....ನಾನು ಹೇಳಿದೆ ರೆಡ್ಡಿಯವರಿಗೆ....ನೀವಲ್ಲ, ಅಂತ. ಆದರೆ, ರೆಡ್ಡಿಯವರು ನೀವೇ ಅಂತ ಸಾಧಿಸಿದರು....ನಿಮ್ಮ ಪಕ್ಕದ ಮನೆಯವರನ್ನು ವಿಚಾರಿಸಿದೆವು, ಅವರು, ಹೌದು, ನೀವೇ ಅದು....ಆಗಾಗ್ಗೆ ನೀವು ಹೀಗೆ ಕೂಗುವುದು ಉಂಟು, ಎಂದರು", ಎಂದು ಶೆಟ್ಟರು ಹೇಳಿದರು. ನಾನು ಗಂಭೀರವಾಗಿ ಮೌನಮುದ್ರೆ ತಾಳಿ, ಅವರ ಹಿಡಿತದಿಂದ ಬಚಾವಾದೆ.

ಹೋಟೆಲೊಳಕ್ಕೆ ನುಗ್ಗಿದೆ. ಪ್ರೊಪ್ರೈಟರ್ ಅಣ್ಣಯ್ಯನವರು ನನ್ನನ್ನು ಕಾಣುತ್ತಲೂ ಕೈಮುಗಿದರು. ಹಳೆಯ ಬಾಕಿ ವಸೂಲಿಗಾಗಿ ಇರಬೇಕು ಆ ಆದರದ ಸ್ವಾಗತ, ಎಂದುಕೊಂಡೆ. ಅಲ್ಲ! ಅವರೂ ಹಿಂದಿನ ದಿನ ರಾತ್ರಿ ನಾನು ಆಡಿದ ಮಾತುಗಳನ್ನು ಉಪಾಯದಿಂದ ಲಾಲಿಸಿದ್ದರಂತೆ. "ಸ್ಪಷ್ಟವಾಗಿ ಕೇಳಿಸಲಿಲ್ಲ.... ಅರ್ಧ ಮರ್ಧ ಕಿವಿಗೆ ಬಿತ್ತು....ಕೆರೆ ಭಾವಿ, ನೀರು, ಸಾಲ ಸೋಲ ಅಂತ ನೀವು ಕಿರಿಚುತ್ತಿದ್ದಿರಿ....ಗಂಟಲನ್ನು ಏಕೆ ಅಷ್ಟು ಎತ್ತರಿಸಿದಿರಿ....ನಿಮಗೆ ಏನೋ ಆಗಿರಬೇಕು, ಇಲ್ಲದಿದ್ದರೆ, ನಿಮ್ಮ ಧ್ವನಿ ಅಷ್ಟು ನಡುಗುವುದಿಲ್ಲ ಅಂತ ನಾನು ವಾದಿಸಿದೆ. ಆದರೆ, ಈ ಮಾಣಿಗಳು ಒಪ್ಪಲಿಲ್ಲ....ನಿಮಗೇಕೆ ಭಾವಿ ಯೋಚನೆ, ಅಂತ ಅವರು ಕೇಳಿದರು. ಸಾಲದ ಚಿಂತೆಯನ್ನೇ ತಲೆಗೆ ಹಚ್ಚಿಕೊಳ್ಳುವವರಲ್ಲವಲ್ಲಾ ನೀವು, ಅಂತ ನಮ್ಮ ಶೀನಪ್ಪ ಹೇಳಿದ...." ಎಂದು ಅಣ್ಣಯ್ಯನವರು ಪ್ರಾರಂಭಿಸಿದರು. "ಯಾವ ವಿಷಯಕ್ಕಾಗಿ ನೀವು ನಿನ್ನೆ ರಾತ್ರಿ ಅಷ್ಟು ರೇಗಿದ್ದೀರಿ?" ಅಂದರು.

"ಯಾಕ್ರಿ ಹೀಗೆ ಒದ್ದಾಡುತ್ತೀರಿ? ಅಂಥದ್ದೇನೂ ಇಲ್ಲ....ಭಾರತದ ಪಂಚವಾರ್ಷಿಕ ಯೋಜನೆ ವಿಷಯ, ಅಷ್ಟೆ" ಎಂದೆ. "ಆದನ್ನು ಕುರಿತು ರೇಡಿಯೋದಲ್ಲಿ ರಾತ್ರಿ ೯–೩೦ಕ್ಕೆ ಭಾಷಣ ಓದಿದೆ" ಎಂದೆ.

"ಅಷ್ಟೇತಾನೆ? ಲೋ! ಸ್ವಾಮಿಯವರಿಗೆ ಸಾದಾ ದೋಸೆ ತೆಗೆದುಕೊಂಡು ಬಂದು ಕೊಡ್ರೋ" ಅಂತ ಹೇಳಿ ಅಣ್ಣಯ್ಯನವರು ನಮ್ಮ ಮೇಜಿನ ಸುತ್ತ ನಿಂತಿದ್ದ ಮಾಣಿಗಳ ಗುಂಪನ್ನು ಚದುರಿಸಿದರು.

—ನಾ. ಕ.



ನೋಡ್ರೀ.... ಆಕೆ ತೌರೂರಿಗೆ ಹೋದಾಗಿಂದ, ಈತ ಎಷ್ಟು ಚೆನ್ನಾಗಿದಾರೆ!...."

ಅಳಿಯನಿಗೆ ಸ್ವಾಗತ

ಪ್ಲಾಟ್‌ಫಾರಂ ತುಂಬ ಮಾವಂದಿರು! ಪ್ರತಿಯೊಬ್ಬರ ಮುಖದ ಮೇಲೂ ಆ ದಿನ ಒಂದುಬಗೆಯ ಕೃತಕ ಮಂದಹಾಸ! ಮೂರುದಿನಗಳಿಂದಲೂ, ಅಳಿಯಂದಿರಿಂದ, ದೀಪಾವಳಿಗೆ ಬರುತ್ತೇವೆ, ಎಂಬ ಕಾಗದ ಪತ್ರಗಳು ಬಂದು ಕೈ ಸೇರಿದಾರಭ್ಯ, ಕನ್ನಡಿ ಮುಂದೆ ನಿಂತು, ಅವರನ್ನು ಸ್ವಾಗತಿಸುವಾಗ ಅವರೆದುರು ತೋರಿಸುವುದಕ್ಕಾಗಿ, ಅಭ್ಯಾಸಮಾಡಿ, ಸ್ಥಿರಪಡಿಸಿಕೊಂಡ, ಒಂದೇ ನಮೂನೆಯ ಅವಲಕ್ಷಣದ ಹಲ್ಕಿರಿತ. ಒಳಜೋಬಲ್ಲಿ ಖಾಲಿ ಕುಳಿತಿದ್ದ ಪರ್ಸುಗಳನ್ನು ಮರೆಮಾಚಲು, ಹೊರಗೆ ಬಿಚ್ಚು ಹಲ್ಲಿನ ದೇಶಾವರದ ಮುಸುಕು!

ನಾನೂ ಆ ದಿನ ಬೆಂಗಳೂರು ಸಿಟಿ ಸ್ಟೇಷನ್ನಿಗೆ ಹೋದದ್ದು ಅದೇ ಕೆಲಸಕ್ಕಾಗಿಯೇ. ಆದರೆ, ನನಗೆ ಏಳು ಹೆಣ್ಣುಮಕ್ಕಳು. ಆ ದಿನ ಆಗಮಿಸುತ್ತಿದ್ದ ದೇವರು ಆರನೆಯದು; ಆದ್ದರಿಂದ, ನನಗೆ ರೂಢಿ ಇತ್ತು. ಆತ ಗಾಡಿಯಿಂದ ಇಳಿದ ತಕ್ಷಣವೇ ಆತನ ಪಕ್ಕಕ್ಕೆ ಧಾವಿಸಿ, ಆತನ ಕೈಯಿಂದ ಆತನಿಗೆ ನಾನೇ ಕೊಟ್ಟಿದ್ದ ಲೆದರ್ ಹ್ಯಾಂಡ್‌ಬ್ಯಾಗನ್ನು ನನ್ನ ಕೈಗೆ ತೆಗೆದುಕೊಳ್ಳುವ ಆ ಕ್ಷಣವೇ, ನನ್ನ ವದನದ ಮೇಲಿಂದ ವೇದನೆಯನ್ನು ತೊಡೆದು, ಅದಕ್ಕೆ ಮಂದಹಾಸವನ್ನು ಬಳಿಯಲು, ನನಗೆ ಬರುತ್ತಿತ್ತು. ಪ್ರಯಾಸವಿಲ್ಲದೆ, ಅಭ್ಯಾಸವಿಲ್ಲದೆ, ನಾನು ನಕ್ಕು ಸ್ವಾಗತಿಸಬಲ್ಲೆ, ಎಂಬ ಧೈರ್ಯ ನನಗೆ!

ಆದ್ದರಿಂದ, ನಾನೂ ಹಲಕೆಲವು ಮಾವಂದಿರೊಂದಿಗೆ, ಗೋಡೆ ಮೇಲಿನ ಬೋರ್ಡುಗಳನ್ನೆಲ್ಲ ಪಠಿಸುತ್ತ ನಿಂತೆ. ಅಲ್ಲಿನ ಒಂದು ಹಲಗೆ ತುಂಡಲ್ಲಿ, “ಪೂನಾ ಎಕ್ಸ್‌ಪ್ರೆಸ್ ೪೫ ನಿಮಿಷ ಲೇಟ್” ಎಂದು ಬರೆದಿತ್ತು. ಅದನ್ನೋದುತ್ತ ನನ್ನ ಪಕ್ಕದಲ್ಲಿದ್ದ ಒಬ್ಬರು ನಿಟ್ಟುಸಿರು ಬಿಟ್ಟರು. “ಇನ್ನು ಆ ಟ್ಯಾಕ್ಸಿಯವನಿಗೆ ಒಂದು ಗಂಟೆ ಕಾದದ್ದಕ್ಕೆ ಎಷ್ಟು ಹೆಚ್ಚು ಕೊಡಬೇಕೊ, ಪರಮಾತ್ಮ!” ಎಂದು ಅವರು ಬಿಸುಸುಯ್ದರು. “ನೀವು ಏನು ಏರ್ಪಾಟು ಮಾಡಿದ್ದೀರಿ? ಎಂದು ನನ್ನ ಕಡೆಗೆ ಒಂದು ಪ್ರಶ್ನೆಯನ್ನೆಸೆದರು.

ಆ ಅಪರಿಚಿತ ವ್ಯಕ್ತಿಯಿಂದ ಆ ಪ್ರಶ್ನೆ ಬಂದಾಗಲೇ, ನನಗೂ ಆ ಸಮಸ್ಯೆಯ ಅರಿವು. ಹೌದು. ಒಂದು ಗಾಡಿ ತುಂಬ ಅಳಿಯಂದಿರಿಳಿದರೆ, ಬೆಂಗಳೂರಿನ ಟ್ಯಾಕ್ಸಿಗಳೇ ಸಾಲದಲ್ಲಾ! ಟ್ಯಾಕ್ಸಿಯಲ್ಲಲ್ಲದೆ ಅಳಿಯಂದಿರು ಕೂರರಲ್ಲಾ! ಅಥವ, ಕೂತರೂ,

ನನ್ನ ಮಗಳೂ ಅವಳ ತಾಯಿಯೂ ನನ್ನ ಮೇಲೆ ರೇಗಿ, ನಮ್ಮ ಜಿಪುಣತನಕ್ಕಾಗಿ ನನ್ನನ್ನು ಶಪಿಸುತ್ತಾರಲ್ಲಾ ಟ್ಯಾಕ್ಸಿಗಳು ದೊರೆಯಲಿಲ್ಲ, ಒಂದಕ್ಕೆ ಹತ್ತು ಕೇಳು ತ್ತಾರೆ, ಪೈಪೋಟಿ ಬಹಳ, ಎಲ್ಲವನ್ನೂ ಮಲ್ಲೇಶ್ವರದ ಮಾವಂದಿರೇ ಲಪಟಾಯಿಸಿ ಬಿಟ್ಟರು, ಎಂದು ಅಂಗಲಾಚಿದರೆ, ಹೆಂಗಸರು ಒಪ್ಪುತ್ತಾರೆಯೆ? ಅವರೊಂದಿಗೆ ವಾಗ್ವಾದದಲ್ಲಿ ಯಾವ ಪುರುಷ ಗೆಲ್ಲುತ್ತಾನೆ? ಶಂಕರಾಚಾರ್ಯರನ್ನೇ ಒಬ್ಬಳು ಹೆಣ್ಣುಮಗಳು ಕಕ್ಕಾಬಿಕ್ಕಿ ಸಿದಳು! "

ಆದರೂ, ನನ್ನ ತಳಮಳವನ್ನು ನಾನು ಆ ವ್ಯಕ್ತಿಯೆದುರು ವ್ಯಕ್ತಪಡಿಸಲಿಲ್ಲ. ದೇವರ ಕೃಪೆಯೊಂದಿದ್ದರೆ, ನನ್ನ ಅಳಿಯ ಬರದೆ ಇರಬಹುದು, ಅವನಿಗೆ ಲೀವು ದೊರೆಯದ ಇರಬಹುದು, ಅವನ ಅಜ್ಜಿಗೆ ಜ್ವರ ತಾಕಬಹುದು, ಅವನ ಸಾಹೇಬರು ಅವನನ್ನು ತಮ್ಮ ಸಂಗಡ ಸರ್ಕೀಟ್ ಹೊರಡಲು ಬಲವಂತಿಸಬಹುದು .... ಅಯ್ಯೋ! ಭಗವಂತನಿಗೆ ಭಕ್ತನನ್ನು ಕಾಪಾಡಲು ನೂರೆಂಟು ದಾರಿಗಳಿವೆ, ಎಂದು ನಾನು ಧೈರ್ಯವಾಗಿದ್ದೆ.

"ಇನ್ನೂ ಆಠ ನಿಮಿಷ ತಡೆ? ಬನ್ನಿ! ಹೋಟೆಲಿಗೆ ಹೋಗಿ ಕಾಫಿ ಕುಡಿ ಯೋಣ ...ಮನೆಯಲ್ಲಿ....ತಿಂಡಿಮಾಡುವ ಅವಾಂತರ ...ಅಡಿಗೆಮನೆಯೊಳಕ್ಕೆ ಇಣುಕ ಬಾರದು ಅಂತ ಕಟ್ಟಪ್ಪಣೆ ಇಣಿಕಿದರೆ, ಲಟ್ಟಣಿಗೆ ತೆಗೆದು ಹೊಡದೇ ಬಿಡುತ್ತೇನೆ ಅಂತಾಳೆ....ಕಾಫಿಗೆ ಸೊನ್ನೆ ಬೆಳಗ್ಗಿಂದ...." ಎಂದು ಅವರು ನನ್ನ ಭುಜದ ಮೇಲೆ ಕೈ ಇಟ್ಟರು. ಅರ್ಧ ಭಾರ ನನ್ನ ಮೈಮೇಲೆ.

ಹೋಟೆಲ್ ಮೇಜಿನ ಆಚೆ ಅವರು, ಈಚೆ ನಾನು. ಮಧ್ಯೆ, ಬಿಲ್ಲಿನ ಚೀಟಿ. ತಮ್ಮ ಸಂಕಟವನ್ನು ತೋಡುತ್ತ ಕುಳಿತರು, ಪಾಪ, ಅವರು.

"ಅಲ್ಲ, ಸ್ವಾಮಿ! ಈ ಅಳಿಯಂದಿರನ್ನು ನಾನು ಹೀಗೆ ಉಪಚರಿಸುತ್ತಿದೇ ನಲ್ಲಾ, ನನಗೆ ಯಾರು ಇಷ್ಟು ಪೂಜೆಮಾಡಿದರು, ನಾನು ಕೇಳುತ್ತೇನೆ" ಎಂದರು.

"ತಮ್ಮ ವಿಚಾರ ನನಗೇನೂ ತಿಳಿಯದು .. ನಾನು ಈ ಹೊತ್ತೇ ತಮ್ಮನ್ನು ನೋಡಿದ್ದು" ಎಂದೆ.

"ನಿಜ, ನಿಜ! ನನ್ನದು ಈಗಿನದು, ಮೂರನೆಯ ಮದುವೆ....ಅಲ್ಲ, ಅಲ್ಲ, ನಾಲ್ಕನೆಯದು! ಎರಡನ್ನು ಕಳೆದುಕೊಂಡಮೇಲೆ, ಮೂರನೆಯದೊಂದು ಬಾಳೆಗಿಡ, ತಾನೆ? ಅದಕ್ಕೆ ತಾಳಿ ಕಟ್ಟಿದ ಮೇಲೆ ತಾನೆ, ಹೆಣ್ಣಿನ ಕೊರಳಿಗೆ?... ಆದ್ದರಿಂದ, ಮೂರಲ್ಲ, ನಾಲ್ಕು ಎಂದೇ ಹೇಳಬೇಕು. ಆದರೂ, ನೋಡಿ, ನಾನು ಈ ದೀಪಾವಳಿ ಸುಖ ಕಂಡೇ ಇಲ್ಲ...ಮೊದಲನೆಯದು, ನನ್ನ ಸೋದರಮಾವನ ಮಗಳು. ಅವಳು ತೊಟ್ಟಿಲು ಕೂಸಾಗಿದ್ದಾಗಲೇ ನನಗೂ ಅವಳಿಗೂ ಗಂಟು ಅಂತೆ ನಮ್ಮ ತಾತ

ನುಡಿದು ಬಿಟ್ಟಿದ್ದ. ಆ ಸೋದರಮಾವನೋ, "ಹೋಗೋಲೋ, ನಿನ್ನನ್ನ ಯಾರೋ ಅಳಿಯ ಅಂತ ಪಾದ ತೊಳೆಯುವುದು" ಅಂತ ಚಪ್ಪರದಲ್ಲೇ ಕಡೆಗಾಣಿಸಿ ನಕ್ಕುಬಿಟ್ಟ. ಇನ್ನು ದೀಪಾವಳಿಗೆ ಬಾ ಅಂತ ಆಹ್ವಾನಿಸುತ್ತಾನೆಯೆ? ತಾನಾಗಿಯೇ ಬಂದರೆ, ತಡೆಯಬೇಡ, ಅಂತ ಹೇಳಿದ್ದನಂತೆ ಮನೆಯಲ್ಲಿ... ಅವಳಲ್ಲಾದ ಮಗಳ ಗಂಡನೇ ಈಗ ಭದ್ರಾವತಿಯಿಂದ ಆಗಮಿಸುತ್ತಿರುವುದು. ಅಲ್ಲಿ, ಕಬ್ಬಿಣದ ಕಾರ್ಖಾನೆಯಲ್ಲಿ ಅವನೊಬ್ಬ ಕಮ್ಮಾರ....ದಿನ ಕೂಲಿಯವ . ಅವನಿಗೆ ಟ್ಯಾಕ್ಸಿ,....ಖಾಸಾ ನಾನೇ ಕಾಯುತ್ತಿದೇನೆ .. ಮನೆಯೆಲ್ಲ ಸಡಗರ... ಅಂಗಡಿಯೆಲ್ಲ ಸಾಲ...." ಎಂದು ಅವರು ನಿಟ್ಟುಸಿರುಬಿಟ್ಟರು.

"ಎರಡನೆಯದು?" ಎಂದು ತಿವಿದೆ, ನಾನು.

"ಮೊದಲನೆಯದರ ತಂಗಿ" ಎಂದು ಹೇಳಿ, ಅಷ್ಟು ಮಾತಿನಲ್ಲೇ ಆ ಪ್ರಥಮ ದೀಪಾವಳಿಯ ಪ್ರಕರಣವನ್ನು ಮುಗಿಸಿಬಿಟ್ಟರು. ಅದೇ ಸೋದರಮಾವನೇ ಹೆಣ್ಣು ಕೊಟ್ಟ ಮಾವ ಎಂದರೆ, ಅವನ ಮನೆಗೆ ಹೋಗಿ, ಅವನ ಹುಡುಗರಿಗೆ ಚಟಾಕಿ ಕೊಡಿಸಿ, ಅವನು ಮಾಡಿಸುವ ಮಂಗಳಾರತಿಗೆ ಮುಖ ಒಡ್ಡುವುದಕ್ಕೆ ನನ್ನ ಸ್ನೇಹಿತ ಹೇಗೆ ಒಪ್ಪಿಯಾನು?

"ಅಲ್ರಿ? ನಮ್ಮ ಕಾಲದಲ್ಲಾದರೆ, ವಧುವಿಗೆ ಎಳೆಯ ವಯಸ್ಸು! ನಾಚಿಕೆ. ಹೆದರಿಕೆ. ಮದುವೆ ಅಡಾಉಡಿಯಲ್ಲಿ ಅವಳ ಕೈಯ್ಯನ್ನು ಹಿಡಿಯುವಾಗಲೇ ಮೈ ಎಲ್ಲ ಬೆವರು; ಕೊರಳೆಲ್ಲ ಬಿಗಿತ; ಎದೆಯೆಲ್ಲ ನಡುಕ. ನಾವು ಆಗ ಮಾತನಾಡಿಸಿದರೆ, ಮರುಮಾತೇ ಇಲ್ಲ. ತಮಾಷೆಮಾಡಿದರೆ, ಕಣ್ಣೀರು. ಹಾಗಿರುತ್ತಿತ್ತು ಪರಿಸ್ಥಿತಿ. ಆದ್ದರಿಂದ, ಆ ಗಲಾಟೆ ಎಲ್ಲ ಮುಗಿದು, ಆರೇಳು ತಿಂಗಳುಗಳಕಾಲ ತನ್ನ ಪತಿಯ ರೂಪು ಗುಣ ಕೀರ್ತಿ ಇವುಗಳ ಧ್ಯಾನದಲ್ಲೇ ಇದ್ದು, ಆತನ ಮೂರ್ತಿಯನ್ನು ಹೃದಯಪೀಠದಲ್ಲಿರಿಸಿ ಪೂಜಿಸಿ, ಎಂದು ಪ್ರತ್ಯಕ್ಷವಾಗುತ್ತಾನೋ ಆ ಪರದೇವತೆ ಎಂದು ತಪಸ್ಸುಮಾಡುತ್ತಿರುತ್ತದೆ, ಹೆಣ್ಣು. ಗಂಡಿಗೂ ಅದೇ ಯೋಚನೆ ಗುಂಡಿಗೆಯೊಳಗೆ. ನಾರಾಯಣ ಕೊಟ್ಟದ್ದೇ ನರ್ಗಿಸ್, ತಾಲಿಗೆ ಬಂದವನೇ ಕಪೂರ್, ಎಂಬ ಹಿಗ್ಗು ಇಬ್ಬರಿಗೂ ಆದ್ದರಿಂದ, ಆ ಕಾಲದಲ್ಲಿ ನಮಗೆ ದೀಪಾವಳಿ ಎಂದು ಬಂದೀತು, ಎಂದು ಮಾವನಿಂದ ಕಾಗದ ಬಂದೀತು, ಹೇಗೆ ಅವಳನ್ನು ಏಕಾಂತದಲ್ಲಿ ಸಂಧಿಸುವುದು, ಎಂಬ ಚಿಂತೆ, ಸಹಜ...."

"ನಾಲ್ಕನೆಯ ಸತಿ ಬಂದಮೇಲೆ ನಿಮ್ಮ ದೀಪಾವಳಿ....ನೀವು ಬಯಸಿದಷ್ಟು ಸಪ್ಪೆರಸ್ಯವಾಗಿ .. " ಎಂದೆ, ನಾನು ಬಿಲ್ಲನ್ನು ಅವರಕಡೆ ತಳ್ಳುತ್ತ.

"ಇಲ್ಲ, ರೀ!" ಎಂದರವರು, ಅದನ್ನು ನನ್ನ ಪಕ್ಕಕ್ಕೆ ನೂಕುತ್ತ. ದೀಪಾವಳಿ ಟೈಂನಲ್ಲಿ ಅವಳು ಆಸ್ಪತ್ರೆ ಸೇರಿದ್ದಳು.... ಇನ್ನೆಲ್ಲಿಯ ದೀಪಾವಳಿ....ಎಲ್ಲರೂ ನನ್ನನ್ನೇ

ಶಪಿಸುತ್ತ, ನನ್ನ ಹಾಳು ಜಾತಕವನ್ನೇ ಮತ್ತೆ ಮತ್ತೆ ತಿರುವಿ ಹಾಕುತ, ಆ ಮಂಚದ ಸುತ್ತ ಕೂತಿದ್ದರು " ಎನ್ನುತ್ತ ಕಣ್ಣೀರಿಟ್ಟರು.

"ಬೇಡಿ, ಬೇಡಿ! ಬದುಕಿದಳಲ್ಲಾ ಆಕೆ, ಇನ್ನೇನು?" ಎಂದೆ, ನಾನು

"ಅದಕ್ಕಲ್ಲಾ ನನ್ನ ದುಃಖ! ಈ ದೀಪಾವಳಿ ಹಬ್ಬಕ್ಕೆ, ಮಾವನಮನೆಗೆ ಹೋಗಿ ಬಾರೋ, ಸಿಕ್ಕಿದ್ದನ್ನೆಲ್ಲ ದೋಚಿಕೊಂಡು ಬಾರೋ, ಎಂದು ಬೆನ್ನು ತಟ್ಟಿ, ಕಳುಹಿಸಲು ನನಗೊಂದು ಗಂಡು ಹುಡುಗ ಇಲ್ಲ; ನನ್ನ ಮನೆಗೆ ಅದೇ ಸಂದೇಶ ಸಹಿತ ಬೇರೊಬ್ಬ ತನ್ನ ಮಗನನ್ನು ಕಳುಹಿಸುವಂತೆ ಮಾತ್ರ ಆಗಿದೆ" ಎಂದು ಗೋಳಿಟ್ಟರು.

"ಎಲಾ, ಭಂಡಾ" ಎಂದೆನಿಸಿತು, ನನಗೆ. "ಒರಳುಕಲ್ಲು ಮದ್ದಳೆಯ ಹತ್ತಿರ ಬಂದು, ನನ್ನನ್ನು ಗುದ್ದುತ್ತಾರೆ ನೋಡು, ಎಂದು ಅತ್ತ ಹಾಗಾಯಿತು, ಈ ಪ್ರಾಣಿಯ ಕಥೆ.... ನನಗಿರುವುದು ಏಳು ಹೆಣ್ಣು ಮಕ್ಕಳು, ಗಂಡುಪಿಳ್ಳೆ ಇಲ್ಲ. ಐದು ಅಳಿಯಂದಿರು ಮನೆಯನ್ನು ತೊಳೆದದ್ದಾಯಿತು.... ಈಗ, ಆರನೆಯವನು ಆರುನೂರರಷ್ಟು ಮಾಡಿ ದಾನೆ.... ನನ್ನೆದುರು, ಈತ... " ಎನ್ನುತ ಹಲ್ಲನ್ನು ಕಟಕಟನೆ ಕಡಿದೆ. ಬಿಲ್ಲನ್ನು ಆತನ ಕೈಯಲ್ಲಿಟ್ಟೆ ...

ಆಗ, ರೈಲು ಬರುವ ಸೂಚನೆಯನ್ನು ಕೊಡುವ ಘಂಟಾನಾದವಾಯಿತು. "ಏಳಿ.... ಇದೆಲ್ಲ ಪೂರ್ವಾರ್ಜಿತ ಕರ್ಮ.... ಹಿಂದಿನ ಜನ್ಮದಲ್ಲಿ ನೀವು ನಿಮ್ಮ ಮಾವಂದಿರನ್ನು ದೀಪಾವಳಿದಿನ ದಿವಾಳಿ ಎಬ್ಬಿಸಿರಬೇಕು. ಅದಕ್ಕೇ ಈ ಜನ್ಮದಲ್ಲಿ ನಿಮ್ಮ ಹಣೆಗೆ ಪಂಗನಾಮ ಬಳಿದ" ಎಂದು ಹೇಳುತ್ತ, ನಾನು ಎದ್ದೆ....

ಆತ ಏಳಲಿಲ್ಲ. ಕುಸಿದು ಕುಳಿತೇ ಇದ್ದ. "ಹೆಂಡತಿಯನ್ನು ನೋಡಿ ಆರು ತಿಂಗಳಾಯಿತಲ್ಲಾ .... ಮಾತನಾಡಿಸಿ, ಮೂರು ತಿಂಗಳಾಯಿತಲ್ಲಾ .... ಎಂದು ನೋಡೇನು? ಎಂದು ನುಡಿಸೇನು? ದೀಪಾವಳಿಗಾದರೂ ಮಾವ ಕರೆಯಿಸಿಕೊಳ್ಳಲಾರನೆ" ಎಂಬ ಪರಿತಾಪವಿರುವ ಅಳಿಯನಾಗಿದ್ದರೆ, ನಾನು ಏಳುತ್ತಿದ್ದೆ, ಸ್ವಾಮಿ! ರೈಲು ಇಲ್ಲಿಗೆ ಬರುವ ಮೊದಲೇ ಹಿಂದಿನ ಸ್ಟೇಷನ್ನಿನಲ್ಲೇ ಅದನ್ನ ಹಿಡಿದು ಜೊತೆಗೆ ಓಡಿ ಬರುತ್ತಿದ್ದೆ

ಆದರೆ, ಈ ಹುಡುಗ? ಮೆರವಣಿಗೆ ಮುಗಿದಕೂಡಲೇ ವಾಕಿಂಗ್ ಪ್ರಾರಂಭ; ಹಸೆಯಮೇಲೆ ಕೂತಿದ್ದಾಗಲೇ ಸರಸ ಸಂಭಾಷಣೆ; ಮೂರುತಿಂಗಳಕಾಲ ಮಾವನ ಮನೆಯಲ್ಲೇ ಠಿಕಾಣಿ; ಭದ್ರಾವತಿಗೆ ಹೋದಮೇಲೆ, ವಾರಕ್ಕಾರು ಕಾಗದ, ಅತ್ತಲಾಗೂ ಇತ್ತಲಾಗೂ ...

ಈಗ, ಏನೂ ಅರಿಯದವನಂತೆ, ... ಇವನ "ರಂಗಪ್ಪನ ದೀಪಾವಳಿ".... ಹೋಗಿರಿ, ಹೋಗಿರಿ, ನಾನು ಏಳುವುದಿಲ್ಲ .... ತಲೆ ಬೋಳಿಸಿಕೊಳ್ಳುವುದಕ್ಕೆ" ಎನ್ನುತ್ತ, ಕೈಯಲ್ಲಿದ್ದ ಕಾಗದದ ತುಂಡನ್ನು ಮೇಜಿನಮೇಲೆ ಎಸೆದರು.

ಅದನ್ನು ನಾನು ಎತ್ತಿಕೊಂಡೆ. ಅವರ ತೋಳನ್ನು ಹಿಡಿದು, ಮೆಲ್ಲನೆ ಎಬ್ಬಿಸಿ ನಿಲ್ಲಿಸಿದೆ. "ನಿಮಗೆ ನಿಮ್ಮ ಬಯಕೆಯ ದೀಪಾವಳಿ ಸುಖ ದೊರೆಯಲಿಲ್ಲ, ಒಪ್ಪಿಕೊಂಡೆ....ನಿಮ್ಮ ಅಳಿಯನಿಗೆ ಬೇಕಾಗಿರುವ ದೀಪಾವಳಿ ನಿಮ್ಮ ಆ ಹಿಂದಿನ ಬಯಕೆಯ ದೀಪಾವಳಿ ಅಲ್ಲ, ಒಪ್ಪಿದೆ. ದೀಪಾವಳಿಗೆ ನಿಮ್ಮ ಮಗನೊಬ್ಬನನ್ನು ಮಾವನ ಮನೆಗೆ ರವಾನಿಸಿ, ಅವನ ಮೂಲಕ ನಿಮ್ಮ ಬಯಕೆಯನ್ನು ಪೂರೈಸಲು ನಿಮ್ಮ ಹಣೆಯಲ್ಲಿ ಬರೆದಿಲ್ಲ, ಅದನ್ನೂ ಒಪ್ಪಿದೆ....ಆದರೂ, ಉತ್ತಿಷ್ಠತ, ಜಾಗ್ರತ, ಪ್ರಾಪ್ಯ ವರಾನ್ ನಿಬೋಧತ....ನೋಡಿ ಅಲ್ಲಿ, ವರ ಇಳಿಯುತ್ತಿದಾನೆ" ಎಂದೆ.

ವರ ಎನ್ನುತ್ತಲೂ, ಅವರ ಮೆದುಳು ಚುರುಕಾಯಿತು. ಕೈ ಕೈ ಹಿಸುಕಬಾರದು; ಅಳಿಯನ ಕೈಗೆ ಕೈಕೊಟ್ಟು ಕುಲುಕಬೇಕು, ಎಂದು ಅವರಿಗೆ ಜ್ಞಾನೋದಯವಾಯಿತು; ಮುಖದಲ್ಲಿ ಕಿರಿತ ಮೂಡಿತು.

ಅವರನ್ನಲ್ಲೇ ಬಿಟ್ಟು, ನಾನು ಡಬ್ಬಿಗಳಿಂದ ಇಳಿದು ಮಾವಂದಿರು ಅರ್ಪಿಸುವ ಹೂಮಾಲೆಗಳಿಗಾಗಿ ಕತ್ತುನೀಡಿ ನಿಂತಿದ್ದ ಅಳಿಯಂದಿರ ಸಾಲನ್ನು ಪರೀಕ್ಷಿಸುತ್ತ ಮುಂದು ಮುಂದಕ್ಕೆ ನಡೆದೆ.

—ನಾ. ಕಸ್ತೂರಿ.

ಆಫ್ರಿಕದಿ ಆ ಮಲನ ಕಾಡುತಿಹ ಇಂಡ್ಯನರ; ಅವನ ತೊಗಲಿಗೆ ಸಹಜವೆನ್ನಿ ಆ ನೀತಿ! ಲಂಕೆಯೊಳಗೇ ಕರಿಯ ದೊರೆಗಳು ಕೂಡ ಅವನನು ಸರಿಸಬೇಕೆ? ತೊತ್ತಾಗಿ ಬಾ ಎಂಬರಯ್ಯ; ದುಡಿ ದುಡಿ ದುಡಿ ಎಂಬರಯ್ಯ; ಸುಖ ಸಮೃದ್ಧಿಗಳ್ ತಲೆದೋರಿದಾಗ ನಡಿ ನಡಿ ನಡಿ ಎಂಬರಯ್ಯ! ಬೆವರು ಸುರಿಸಿದ ನೆಲದಿ ಬಾಳಗೊಡೆವೆಂಬರಯ್ಯ! —ಆವ ನೀತಿಯಿದೆಂದು ಖತಿಗೊಂಡು ಹಲ್ಗಡಿಯುತಿಹ ನಮ್ಮ ಕುಹಕೇಶ್ವರ—

—ರಾಮಕೃಷ್ಣ.

ಏನು ಗ್ರಹಚಾರಾನೋ?

"ಲೇ ಸರಸು, ಮುಂದಿನ ವರ್ಷ ಗಂಡನಮನೇಗೆ ಓಡ್ತೀಯ. ಆಮೇಲೆ ಈ ಮಣ್ಣಿಂದು, ಮರದ್ದು ಬೊಂಬೆ ಕದ್ಕೊಂಡು ನಿನ್ಗೇನು! ಈ ವರ್ಷ ಅಣಿಯಾಗಿ ಬೊಂಬೆ ಇಟ್ಟು ವಾರಣವಾಗಿ ನವರಾತ್ರಿ "ಹತ್ತು ದಿನಾ"ನೂ ಬೊಂಬೇಗೆ ಹಾಡು ಹಸೆ, ಬಾಗಿನ ಎಲ್ಲಾನೂ ಮಾಡೆ ತಾಯಿ" ಎಂದರು ಗೌರಜ್ಜಿ.

ಇಂಟರ್ ನಪಾಸಾಗಿದ್ದರೂ, ಕಾಲೇಜಿನಲ್ಲಿ ಕೆಫೆಟೇರಿಯ ನಡೆಸಿದವಳಾಗಿದ್ದರೂ, "ಅಮ್ಮಾವ್ರು-ಗಂಡಿ"ದಲ್ಲಿ ಇವಳೇ ಅಮ್ಮಾವ್ರು ಪಾರ್ಟು ಹಾಕಿದ್ದರೂ, ಸರಸು ಬೊಂಬೆ ಮಾತು ಕೇಳಿ ಬಾಯಿ ಬಾಯಿ ಬಿಟ್ಟಳು. ಕುದುರೆಯಂತೆ ಬೆಳದ ಹೆಣ್ಣುಮಕ್ಕಳೇ ಬೊಂಬೆ ಗಿಂತಲೂ ದೊಡ್ಡದಾಗಿ ಬಾಯಿಬಿಟ್ಟರೆ, ಅದಕ್ಕೆ ಅಜ್ಜಿ ಬೆಂಬಲ ಇದ್ದರೆ, ಅಪ್ಪ ಗಟ್ಟಿಮುಟ್ಟಾಗಿದ್ದರೆ—ಪಟ್ಟದ ಗೊಂಬೇಗೆ ಪಟ್ಟೆ ಸಿಕ್ಕೇ ಸಿಗುತ್ತೆ. ಪಟ್ಟದ ರಾಣೀಗೂ ಪಟಾಪಟಿ ಗುನ್ನಂಪಟ್ಟೆ ಸೀರೇನೂ ಸಿಗುತ್ತೆ. ಯಥಾ ಪ್ರಕಾರ ಜಾಣ ಸರಸು ಅಮಾವಾಸ್ಯೆ ಹಿಂದಿನ ದಿನವೇ ಬೊಂಬೇಗೆ ಅಲಂಕಾರ ಮಾಡಿ ಮುಗಿಸಿದಳು.

ಪಟ್ಟದ ರಾಣೀಗೆ ಮೈತುಂಬ ಸೆರಗು ಹೊದ್ದಿಸಿರುವ ಜರತಾರಿಸೀರೆ ಕೆಂಪು ಹವಳದಸರ, ತಲೆಗೆನಾದರು, ಕುಚ್ಚಿನ ಜಡೇಗೆ ಕೆಂಪಿನ ಜಡೆಬಿಲ್ಲೆ, ಕೈಗೆವಂಕಿ, ಕುತ್ತಿಗೆಗೆ ಅಡ್ಡಿಕೆ, ಕಾಲಿಗೆ ಚೈನು, ಬೆರಳುಗಳಿಗೆ ಕಾಲುಂದಿಗೆ, ಕೈತುಂಬ ಬಳೆ, ಕಿವಿಗೆ ಓಲೆಗರಿ ವಾಲೆ, ಮೂಗಿಗೆ ಭಾರಿ ಮೂಗುತಿ ಎಲ್ಲಾನೂ ಇಟ್ಟು "ನೋಡೆ-ಗೌರಜ್ಜಿ" ಅಂದಳು. ಗೌರಜ್ಜೀಗೆ ಹೃದಯಕ್ರಿಯೆ ನಿಂತು ಹೋಗುವಷ್ಟು ಸಂತೋಷ ಆಯ್ತು! ಹಾಗೆಯೇ ಪಟ್ಟದ ರಾಜನೂ ಅಲಂಕೃತನಾಗಿ ರಾರಾಜಿಸಿದ—ಅಂತೆಯೇ ನವದಂಪತಿಗಳೂ 'ಕೂಲಿಂಗ್ ಗ್ಲಾಸ್' ಹಾಕಿಕೊಂಡು ಮೆರೆಯಲು ಸಿದ್ಧರಾದರು! ಯಥಾಪ್ರಕಾರ ಜಾಣ ಸರಸು ಹಬ್ಬದ ಹಿಂದಿನ ದಿವಸದ ರಾತ್ರಿಯೇ ಬೊಂಬೇನೆಲ್ಲ ಜೋಡಿಸಿಟ್ಟು ತರಹಾವರಿ ಅಲಂಕಾರ ಮಾಡಿದಳು. ಅಂಗಡಿಬೀದಿ, ಅಂಗಡಿ ಬೀದಿಯಲ್ಲಿ ಅಕ್ಕಿ ಬೇಳೆ ಅಂಗಡಿ, ತರಕಾರಿ ಅಂಗಡಿ, ಬೆಲೂನ್ ಬಳೆ ಅಂಗಡಿ, ಇತ್ಯಾದಿ; ಕಾಲೇಜು, ಸ್ಕೂಲು, ಸ್ಕೂಲಿನಲ್ಲಿ ಮೇಡಂ, ಮೇಡಂ ಕೈಲಿ ಕೋಲು; ಆಸ್ಪತ್ರೆ, ಹೋಟಲು, ಸಮಾಜ, ರೀಡಿಂಗ್ ರೂಮು, ಶಿಶುವಿಹಾರ, ಸಿಟಿಬಸ್ಸು—ಹೀಗೆ ಒಂದು ಪುಟ್ಟ ಪಟ್ಟಣವನ್ನೇ ಕಟ್ಟಿ ನಾಗರಿಕ ಜೀವನಕ್ಕೆ ಕನ್ನಡಿ ಹಿಡಿದಿದ್ದಳು ಸರಸು.

ಮಾರನೆ ದಿನ ನವರಾತ್ರಿ ಪಾಡ್ಯದ ದಿನ ಹಬ್ಬದ ಅಡಿಗೆಮಾಡಿ, ಯಜಮಾನರೂ ಅವತ್ತು ಊಟಕ್ಕೆ ಬರಲಿ ಅಂತ ಬೀದಿಬಾಗಿಲಲ್ಲಿ ಕಾಯುತ್ತ ನಿಂತುಕೊಂಡಿದ್ದೆ. ಗೌರಜ್ಜೀನೂ ಎದುರುಗಡೆ ಜಗಲಿಮೇಲೆ ನಿಂತಿದ್ದರು.

"ಅಡಿಗೆ, ಊಟ ಎಲ್ಲಾ ಮುಗಿಯಿತೆ ಗೌರಜ್ಜಿ" ಎಂದು ಕೇಳಿದೆ.

"ಏನು ಮುಗಿಯೋದು....ನಾಚಿಗೇಡು, ಮನೇಲಿ ಈ ರಂಪ ಎಲ್ಲಾದ್ರೂ ಉಂಟೇನೆ" ಎಂದರು ಗೌರಜ್ಜಿ ಇನ್ನಷ್ಟು ಮುಖ ಸುಕ್ಕುಮಾಡಿಕೊಂಡು.

"ಏನು....ಗೌರಜ್ಜಿ ಹಾಗಂದರೆ–ಏನಾಯ್ತು ಹೇಳಬಾರದೆ" ಎಂದೆ.

ಎಪ್ಪತ್ತನ್ನೂ ದಾಟಿ ಬದುಕಿರುವ ಗೌರಜ್ಜಿ ಹೇಳಿದರು—"ಇಲ್ಲಿ ಕೇಳೆ, ಶಂಕರಿ, ಇವತ್ತು ಬೆಳಿಗ್ಗೆ ಕಚೇರಿ ಮಾಡಿಕೊಂಡು ಮನೇಗೆ ಬರೋವಾಗ ದಾರೀಲಿ ಯಾವನೋ ಕಂಚಿನ ಸಾಮಾನು ಮಾರ್ತಾ ಇದ್ದನಂತೆ. ಬೊಂಬೆ ಮಧ್ಯೆ ಇಟ್ಟರೆ ಚೆನ್ನಾಗಿರುತ್ತೆ ಅಂತ ಅವನ ಹತ್ತಿರ ಒಂದು ಕಂಚಿನ ಗಾಂಧಿ ವಿಗ್ರಹಾನ ಕೊಂಡು ತಂದನಂತೆ. ಅದನ್ನು ಮೇಜಿ ಅಗ್ರಾಸನದಲ್ಲಿಟ್ಟು ಅಲಂಕಾರ ಮಾಡುವಹಾಗೆ ಯಜಮಾನಿಗೆ ಹೇಳಿದನಂತೆ. ಯಜಮಾನಿ ಆ ಗಾಂಧಿ ವಿಗ್ರಹಾನ ಸಮಾಜದ ಮುಂದಿಟ್ಟು ಗಂಡನಿಗೆ ನೋಡುಕ್ಕೆ ಹೇಳಿದಳಂತೆ. ಗಂಡನಿಗೆ ಅದು ಸರಿಬೀಳದೆ ತಕ್ಷಣ ಆ ಪ್ರತಿಮೇನ ಆ ಜಾಗದಿಂದ ಬದಲಾಯಿಸಿ ಮಾರ್ಕೆಟ್ ಮುಂದಿಟ್ಟನಂತೆ. ಇದರಿಂದ ಬೊಂಬೆ ಜೋಡಣೆಯೇ ಕೆಟ್ಟುಹೋಯ್ತು ಅಂತ ಸರಸು ಕುಣಿಯುತ್ತ ಅದನ್ನು ತೆಗೆದು ತನ್ನ ಕಾಲೇಜ್ ಮುಂದಿಟ್ಟುಕೊಂಡಳಂತೆ. ಯಜಮಾನಿ ತನ್ನ ಹರಾನೇ ಗೆಲ್ಲಬೇಕು ಅಂತ ಮೊಂಡು ಹಿಡಿದು ಕೂತುಕೊಂಡಳಂತೆ. ಅಷ್ಟುಹೊತ್ತಿಗೆ ಅದನ್ನು ಶಿಶುವಿಹಾರದಲ್ಲಿಡ್ತೀನಿ ಅಂತ ಕಿರಿಯುವಳು ಗಾಂಧಿ ವಿಗ್ರಹಾನ ಕೈಗೆ ತೆಗೆದು ಕೊಂಡಳಂತೆ. ಯಜಮಾನಿಗೆ ಸಿಟ್ಟುಬಂದು ಕಿರಿಯ ಮಗಳಿಗೆ ಎರಡು ಬಿಗಿದಳಂತೆ. ಅದು ಒಂದೇಸಮನೆ ಹೊಡಕೊಳ್ಳೋಕೆ ಪ್ರಾರಂಭಿಸಿದಮೇಲೆ ನಾನು ಅಡಿಗೆಮನೆ ಯಿಂದ ಬಂದು ನೋಡ್ತೀನಿ— ಗಾಂಧಿಪ್ರತಿಮೆ ಚೂರು ಚೂರಾಗಿ, ತಲೆ ಒಂದುಕಡೆ, ಕೈಕಾಲೊಂದುಕಡೆ ಬಿದ್ದಿದೆ—ಹಿರಿಮಗಳು ತಲೆ ಕೆದರಿಕೊಂಡು ಸೆರಗನ್ನ ಸೊಂಟಕ್ಕೆ ಬಿಗಿದಿದಾಳೆ—ಗಂಡ ರೂಮಿನಲ್ಲಿ ಕೂತುಕೊಂಡು ವಿಗ್ರಹ ಒಡದಿದ್ದಕ್ಕೆ ನೀನೇ ಕಾರಣ ಅಂತ ಹೆಂಡತೀನ ಮನಸ್ಸಿ ಬೈತಿದಾನೆ—ಯಜಮಾನಿ ಬುಸ್ ಅಂತ ಮೂಲೆ ಸೇರಿ ದಾಳೆ, ಯಾರಿಗೂ ಊಟ ಬೇಡವಂತೆ, ಅಡಿಗೆ ಆರಿ ತಂಗಳಾಗ್ತಾ ಇದೆ, ಏನು ಗ್ರಹಚಾರಾನೋ ಇವತ್ತು" ಅಂತ.

"ಅಯ್ಯೋ! ಆ ಪುಣ್ಯಪುರುಷ ಗಾಂಧಿ ಯಾಕಾರ ಇಷ್ಟುಬೇಗ ಸತ್ತು ಹೋದನೋ" ಎಂದೆ ನಾನು.

"ಅಯ್ಯೋ ಮಂಕೆ, ಆ ಪುಣ್ಯಪುರುಷ ಯಾಕಾರ ಈ ದೇಶದಲ್ಲಿ ಹುಟ್ಟಿದನೋ" ಎಂದರು ಗೌರಜ್ಜಿ!

—ಶಾ. ರಾ.

ಶೀಘ್ರದಲ್ಲಿಯೇ ಬರುತ್ತದೆ!



ರಾಜಾಸುಲೋಚನ..ರೇವತಿ..ಹರಿಣಿ

ಸ್ಟುಡಿಯೋ
ಫಿಲಿಂಸೆಂಟರ್
ರೇವತಿ
(ಮದರಾಸು)

ನಿರ್ದೇಶಕ:
ಶಂಕರಸಿಂಗ್

a PRAKASH Release

ಚಿತ್ರ ಪ್ರೇಮಿಗಳ ಮನವನ್ನು ಸೂರೆಗೊಂಡಿರುವ ಮನೋಹರ ಚಿತ್ರ!

ಈಗ ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದೆ!

ಬೆಂಗಳೂರು:


ಜೈ ಹಿಂದ್ - ಸೆಂಟ್ರಲ್ - ನ್ಯೂ ಆಪೇರಾ

ಕೆ.ಜಿ.ಎಫ್.: ಶ್ರೀ ಕೃಷ್ಣಾ **ಶಿವಮೊಗ್ಗ: ವಿನಾಯಕ**

ಅರುಣಾರವರ:

ತೂಕ್ಕು ತೂಕ್ಕಿ

-(ತಮಿಳು)-



ಶಿವಾಜಿ ಗಣೇಶನ್ - ಬಾಲಯ್ಯ - ಲಲಿತ - ಪದ್ಮಿನಿ - ರಾಗಿಣಿ

ಮುಂದಿನ ಬದಲಾವಣೆ:—

ಮೈಸೂರು:—ವುಡ್ ಲ್ಯಾಂಡ್ಸ್.

A PRAKASH RELEASE

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ೨

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦

ಬಿಡಿ ಪ್ರತಿ ಕೇವಲ ಆಣೆ ೦—೪—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.



ನೆನಪಿರಲಿ!

ಕಸ್ತೂರಿ ನೀಲಂ ಸೋಪು

ಉಪಯೋಗಿಸಿದಲ್ಲಿ ಬಟ್ಟೆಗೆ ನೀಲಿ ಹಾಕಬೇಕಾಗಿಲ್ಲ.

ಎಲ್ಲಾ ಕಡೆಗಳಲ್ಲೂ ದೊರಕುತ್ತದೆ.

Printed by B. S. Iyengar, Bangalore City

Publisher—B. N. Gupta. Editor—M. Sivaram.